ಕರ್ನಾಟಕ ಸರ್ಕಾರ

**ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವಾಲಯ**

# ಕರ್ನಾಟಕ ನ್ಯಾಯವಾದಿಗಳ ಕಲ್ಯಾಣ ನಿಧಿ ಅಧಿನಿಯಮ, 1983

**(ಕರ್ನಾಟಕ ಅಧಿನಿಯಮ ಸಂಖ್ಯೆ 1985ರ 2)**

ಕರ್ನಾಟಕ ಸರ್ಕಾರದ ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ನಿರ್ದೇಶಕರಿಂದ ಮುದ್ರಿತವಾಗಿ ಪ್ರಕಟಿತವಾಗಿದೆ

1988

# ಕರ್ನಾಟಕ ನ್ಯಾಯವಾದಿಗಳ ಕಲ್ಯಾಣ ನಿಧಿ ಅಧಿನಿಯಮ, 1983

**(ಕರ್ನಾಟಕ ಅಧಿನಿಯಮ ಸಂಖ್ಯೆ 1985ರ 2)**

## ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವಾಲಯ

## ಅಧಿಸೂಚನೆ

**ಕ್ರಮಾಂಕ ಲಾ 76 ಎಲ್‌ಎಂಪಿ 87, ಬೆಂಗಳೂರು, ದಿನಾಂಕ:2ನೇ ನವೆಂಬರ್, 1987**

ಕರ್ನಾಟಕ ರಾಜಭಾಷಾ ಅಧಿನಿಯಮ 1963 (1963ರ ಕರ್ನಾಟಕ ಅಧಿನಿಯಮ 26)ರ 5ಕ ಪ್ರಕರಣದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ರಾಜ್ಯಪಾಲನಾದ ನಾನು, ಶ್ರೀ ಎ.ಎನ್. ಬ್ಯಾನರ್ಜಿ, ಬೆಂಗಳೂರು, ಕರ್ನಾಟಕ ನ್ಯಾಯವಾದಿಗಳ ಕಲ್ಯಾಣ ನಿಧಿ ಅಧಿನಿಯಮ, 1983ರ ಕನ್ನಡ ಭಾಷೆಯಲ್ಲಿರುವ ಈ ಮುಂದಿನ ಭಾಷಾಂತರವು ಸರ್ಕಾರಿ ರಾಜ್ಯಪತ್ರದಲ್ಲಿ ಈ ಅಧಿಸೂಚನೆಯು ಪ್ರಕಟವಾದ ದಿನಾಂಕದಿಂದ ಪರಿಣಾಮಕಾರಿಯಾಗುವಂತೆ ಕನ್ನಡ ಭಾಷೆಯಲ್ಲಿ ಅದರ ಅಧಿಕೃತ ಪಾಠವಾಗಿರತಕ್ಕದ್ದೆಂದು ಈ ಮೂಲಕ ನಿರ್ದಿಷ್ಟಪಡಿಸುತ್ತೇನೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

**ವಿ. ರಾಮಚಂದ್ರ ರಾಜು**

ಸರ್ಕಾರದ ಅಧೀನ ಕಾರ್ಯದರ್ಶಿ,

ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆ, (ಆಡಳಿತ–II)

## ಕರ್ನಾಟಕ ನ್ಯಾಯವಾದಿಗಳ ಕಲ್ಯಾಣನಿಧಿ ಅಧಿನಿಯಮ, 1983

### ವಿಷಯಾನುಕ್ರಮಣಿಕೆ


| ಪ್ರಕರಣಗಳು | | ಪುಟ ಸಂಖ್ಯೆ |
|---|---|---|
| 1. | ಚಿಕ್ಕ ಹೆಸರು ಮತ್ತು ಪ್ರಾರಂಭ | 1 |
| 2. | ಪರಿಭಾಷೆಗಳು | 1–7 |
| 3. | ನ್ಯಾಯವಾದಿಗಳ ಕಲ್ಯಾಣ ನಿಧಿ | 2–3 |
| 4. | ಟ್ರಸ್ಟೀ ಸಮಿತಿಯ ಸ್ಥಾಪನೆ | 3–4 |
| 5. | ಟ್ರಸ್ಟೀ ಸಮಿತಿಯು ನಾಮನಿರ್ದೇಶಿತ ಸದಸ್ಯರ ಅನರ್ಹತೆ ಮತ್ತು ಅವರನ್ನು ತೆಗೆದು ಹಾಕುವುದು | 4–5 |
| 6. | ಐಸ್ಟೀ ಸಮಿತಿಯ ನಾಮನಿರ್ದೇಶಿತ ಸದಸ್ಯರುಗಳ ರಾಜೀನಾಮೆ ಮತ್ತು ಆಕಸ್ಮಿಕ ಖಾಲಿ ಸ್ಥಾನಗಳನ್ನು ಭರ್ತಿ ಮಾಡುವುದು | 5 |
| 7. | ಖಾಲಿ ಸ್ಥಾನ, ನ್ಯೂನತೆ ಇತ್ಯಾದಿಗಳಿಂದ ಟ್ರಸ್ಟೀ ಸಮಿತಿಯ ಕಾರ್ಯವು ಅಸಿಂಧುವಾಗತಕ್ಕದ್ದಲ್ಲ | 5 |
| 8. | ನಿಧಿಯನ್ನು ನಿಹಿತಗೊಳಿಸುವುದು ಮತ್ತು ಅದರ ವಿನಿಯೋಗ | 5 |
| 9. | ಟ್ರಸ್ಟೀ ಸಮಿತಿಯ ಪ್ರಕಾರ್ಯ | 6 |
| 10. | ಸಾಲ ತೆಗೆದುಕೊಳ್ಳುವುದು ಮತ್ತು ಹೂಡಿಕೆ | 7 |
| 11. | ಕಾರ್ಯದರ್ಶಿಯ ಅಧಿಕಾರಿಗಳು ಮತ್ತು ಕರ್ತವ್ಯಗಳು | 7 |
| 12. | ನಿಧಿಗೆ ಗೊತ್ತುಪಡಿಸಿದ ಹಣದ ವರ್ಗಾವಣೆ | 8 |
| 13. | ನ್ಯಾಯವಾದಿ ಸಂಘಗಳ ಮಾನ್ಯತೆ ಮತ್ತು ನೋಂದಣಿ | 8 |
| 14. | ನ್ಯಾಯವಾದಿ ಸಂಘಗಳ ಕರ್ತವ್ಯಗಳು | 8–9 |
| 15. | ನಿಧಿಯ ಸದಸ್ಯತ್ವ | 9–10 |
| 16. | ವೃತ್ತಿಯು ಸಮಾಪ್ತಿಯಾದ ಮೇಲೆ ನಿಧಿಯಿಂದ ಸಂದಾಯ | 10–11 |
| 17. | ನಿಧಿಯಲ್ಲಿನ ಹಿತಾಸಕ್ತಿಯ ಪರಭಾರೆ, ಜಪ್ತಿ ಇತ್ಯಾದಿಗಳ ಮೇಲೆ ಪರಿಬಂಧ | 11 |
| 18. | ಸದಸ್ಯರುಗಳಿಗೆ ಸಮೂಹ ಜೀವವಿಮೆ ಮತ್ತು ಇತರ ಪ್ರಯೋಜನಗಳು | 11 |
| 19. | ಟ್ರಸ್ಟೀ ಸಮಿತಿಯ ಸಭೆಗಳು | 12 |
| 20. | ಟ್ರಸ್ಟೀ ಸಮಿತಿಯ ಸದಸ್ಯರ ಪ್ರಯಾಣ ಮತ್ತು ದಿನಭತ್ಯ | 12 |
| 21. | ಟ್ರಸ್ಟೀ ಸಮಿತಿಯ ತೀರ್ಮಾನಗಳ ವಿರುದ್ಧ ಅಪೀಲು | 12 |

| | | |
|---|---|---|
| 22. | ಬಾರ್ ಕೌನ್ಸಿಲ್‌ನಿಂದ ಸ್ಟಾಂಪುಗಳ ಮುದ್ರಣ ಮತ್ತು ಹಂಚಿಕೆ | 12–13 |
| 23. | ವಕಾಲತ್ತು, ಸ್ಟಾಂಪುಗಳನ್ನು ಹೊಂದಿರತಕ್ಕದ್ದು | 13 |
| 24. | ಸದ್ಭಾವನೆಯಿಂದ ಕೈಕೊಂಡ ಕಾರ್ಯದ ಸಂರಕ್ಷಣೆ | 13 |
| 25. | ಸಿವಿಲ್ ನ್ಯಾಯಾಲಯಗಳ ಅಧಿಕಾರ ವ್ಯಾಪ್ತಿಯ ಪ್ರತಿಷೇಧ | 14 |
| 26. | ಸಾಕ್ಷಿಗಳನ್ನು ಸಮನು ಮಾಡಲು ಮತ್ತು ಸಾಕ್ಷವನ್ನು ಪಡೆಯಲು ಅಧಿಕಾರ | 14 |
| 27. | ನೋಂದಾಯಿತ ಗುಮಾಸ್ತರ ಕಲ್ಯಾಣ ನಿಧಿ | 14–15 |
| 28. | ನಿಯಮ ರಚನಾಧಿಕಾರ | 15 |
| 29. | 1958ರ 16ನೇ ಅಧಿನಿಯಮದ ತಿದ್ದುಪಡಿ | 15 |
| | ಅನುಸೂಚಿ | 16 |

**ಕರ್ನಾಟಕ ಅಧಿನಿಯಮ, 1985ರ ಸಂಖ್ಯೆ 2**

(1985ರ ಜನವರಿ 10ನೇ ದಿನದಂದು ಕರ್ನಾಟಕ ವಿಶೇಷ ರಾಜ್ಯಪತ್ರದಲ್ಲಿ ಮೊದಲಬಾರಿಗೆ ಪ್ರಕಟವಾಯಿತು)

# ಕರ್ನಾಟಕ ನ್ಯಾಯವಾದಿಗಳ ಕಲ್ಯಾಣ ನಿಧಿ ಅಧಿನಿಯಮ, 1983

(1984ರ ಡಿಸೆಂಬರ್ ಇಪ್ಪತ್ತೆಂಟನೇ ದಿನದಂದು ರಾಷ್ಟ್ರಪತಿಯ ಅನುಮತಿಯನ್ನು ಪಡೆದಿದೆ.)

ಕರ್ನಾಟಕ ರಾಜ್ಯದಲ್ಲಿ ನ್ಯಾಯವಾದಿಗಳಿಗೆ ನಿವೃತ್ತಿ ಪ್ರಯೋಜನಗಳ ಸಂದಾಯಕ್ಕಾಗಿ ಕಲ್ಯಾಣ ನಿಧಿಯೊಂದರ ರಚನೆಗಾಗಿ ಮತ್ತು ಅದಕ್ಕೆ ಸಂಬಂಧಿಸಿದ ಅಥವಾ ಅದಕ್ಕೆ ಪ್ರಾಸಂಗಿಕವಾದ ವಿಷಯಗಳಿಗಾಗಿ ಉಪಬಂಧಿಸುವ ಅಧಿನಿಯಮ.

ಕರ್ನಾಟಕ ರಾಜ್ಯದಲ್ಲಿನ ನ್ಯಾಯವಾದಿಗಳಿಗೆ ನಿವೃತ್ತಿ ಪ್ರಯೋಜನಗಳ ಸಂದಾಯಕ್ಕಾಗಿ ಕಲ್ಯಾಣ ನಿಧಿಯೊಂದರ ರಚನೆಗಾಗಿ ಮತ್ತು ಅದಕ್ಕೆ ಸಂಬಂಧಿಸಿದ ಅಥವಾ ಅದಕ್ಕೆ ಪ್ರಾಸಂಗಿಕವಾದ ವಿಷಯಗಳಿಗಾಗಿ ಉಪಬಂದಿಸುವುದು ವಿಹಿತವಾಗಿರುವುದರಿಂದ,

ಭಾರತ ಗಣರಾಜ್ಯದ ಮೂವತ್ತನಾಲ್ಕನೆ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲವು ಈ ಕೆಳಕಂಡಂತೆ ಅಧಿನಿಯಮಿತಗೊಳಿಸಿದೆ.–

**1. ಚಿಕ್ಕ ಹೆಸರು, ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು ಕರ್ನಾಟಕ ನ್ಯಾಯವಾದಿಗಳ ಕಲ್ಯಾಣ ನಿಧಿ ಅಧಿನಿಯಮ, 1983 ಎಂದು ಕರೆಯತಕ್ಕದ್ದು.

(2) ಇದು ರಾಜ್ಯ ಸರ್ಕಾರವು ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು.

**2. ಪರಿಭಾಷೆಗಳು:–** ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು.–

(ಕ) "ನ್ಯಾಯವಾದಿ" ಎಂದರೆ, 1961ರ ನ್ಯಾಯವಾದಿಗಳ ಅಧಿನಿಯಮ (1961ರ ಕೇಂದ್ರ ಅಧಿನಿಯಮ 25) ಪ್ರಕರಣದ ಮೇರೆಗೆ ಕರ್ನಾಟಕ ಬಾರ್ ಕೌನ್ಸಿಲ್ ಸಿದ್ಧಪಡಿಸಿದ ಮತ್ತು ಇಟ್ಟಿರುವ ನ್ಯಾಯವಾದಿಗಳ ರಾಜ್ಯಮಟ್ಟದ ಹೆಸರು ಪಟ್ಟಿಯಲ್ಲಿ ಯಾರ ಹೆಸರನ್ನು ನಮೂದು ಮಾಡಲಾಗಿದೆಯೋ ಆ ವ್ಯಕ್ತಿ ಮತ್ತು ಸದರಿ ಅಧಿನಿಯಮದ 55ನೇ ಪ್ರಕರಣದ ಮೇರೆಗೆ ಯಾರ ಹಕ್ಕುಗಳನ್ನು ಉಳಿಸಲಾಗಿದೆಯೋ ಹಾಗೂ ಕರ್ನಾಟಕ ರಾಜ್ಯದಲ್ಲಿ ಸಾಮಾನ್ಯವಾಗಿ ವೃತ್ತಿಯನ್ನು ನಡೆಸುತ್ತಿರುವ ನ್ಯಾಯವಾದಿಯನ್ನು ಒಳಗೊಳ್ಳುತ್ತದೆ;

(ಖ) "ನ್ಯಾಯವಾದಿಗಳ ಸಂಘ" ಎಂದರೆ, 13ನೇ ಪ್ರಕರಣದ ಮೇರೆಗೆ ಬಾರ್ ಕೌನ್ಸಿಲ್‌ನಿಂದ ಮನ್ನಣೆ ಪಡೆದ ನ್ಯಾಯವಾದಿಗಳ ಸಂಘ;

(ಗ) "ಬಾರ್ ಕೌನ್ಸಿಲ್" ಎಂದರೆ 1961ರ ನ್ಯಾಯವಾದಿಗಳ ಅಧಿನಿಯಮ (1961ರ ಕೇಂದ್ರ ಅಧಿನಿಯಮ, 25)ರ 3ನೇ ಪ್ರಕರಣದ ಮೇರೆಗೆ ರಚಿತವಾದ ಕರ್ನಾಟಕ ಬಾರ್ ಕೌನ್ಸಿಲ್;

(ಘ) "ವೃತ್ತಿ ಸಮಾಪ್ತಿ" ಎಂದರೆ, ನ್ಯಾಯವಾದಿಯ ನಿವೃತ್ತಿ ಅಥವಾ ಮರಣ ಅಥವಾ ಇತರ ಯಾವುದೇ ಕಾರಣದ ಮೇಲೆ ನ್ಯಾಯವಾದಿ ಹೆಸರನ್ನು ಬಾರ್‌ಕೌನ್ಸಿಲ್ ಇಟ್ಟಿರುವ ಹೆಸರು ಪಟ್ಟಿಯಿಂದ ಅವನ ಹೆಸರನ್ನು ತೆಗೆದು ಹಾಕುವುದು;

(ಙ) "ಅವಲಂಬಿತರು" ಎಂದರೆ, ಹೆಂಡತಿ, ಗಂಡ, ತಂದೆ, ತಾಯಿ ಮತ್ತು ಅವಿವಾಹಿತ ಅಪ್ರಾಪ್ತ ವಯಸ್ಸಿನ ಮಕ್ಕಳು ಅಥವಾ ಅವರ ಪೈಕಿ ಜೀವಿಸಿರುವಂಥವರು.

(ಚ) "ನಿಧಿ" ಎಂದರೆ 35ನೇ ಪ್ರಕರಣದ ಮೇರೆಗೆ ರಚಿಸಲಾದ ನ್ಯಾಯವಾದಿಗಳ ಕಲ್ಯಾಣ ನಿಧಿ;

(ಛ) "ನಿಧಿಯ ಸದಸ್ಯ" ಎಂದರೆ, ನಿಧಿಯ ಪ್ರಯೋಜನ ಪಡೆಯಲು ಸೇರಿಸಿಕೊಂಡ ಮತ್ತು ಈ ಅಧಿನಿಯಮದ ಉಪಬಂಧಗಳ ಮೇರೆಗೆ ಅದರ ಸದಸ್ಯನಾಗಿ ಮುಂದುವರಿಯುತ್ತಿರುವ ನ್ಯಾಯವಾದಿ;

(ಜ) "ನಿಯಮಿಸಲಾದುದು" ಎಂದರೆ, ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೂಲಕ, ಬಾರ್ ಕೌನ್ಸಿಲ್‌ನಿಂದ ನಿಯಮಿಸಲಾದುದು;

(ಝ) "ನಿವೃತ್ತಿ" ಎಂದರೆ, ಟ್ರಸ್ಟೀ ಸಮಿತಿಗೆ ತಿಳಿಸಲಾದ ಮತ್ತು ಅದು ದಾಖಲು ಮಾಡಿಕೊಂಡ ವೃತ್ತಿಯ ನಿಲುಗಡೆ;

(ಞ) "ನೋಂದಾಯಿತ ಕಾರಕೂನ" ಎಂದರೆ, ಭಾರತ ಸಂವಿಧಾನದ 225ನೇ ಅನುಚ್ಛೇದದ ಮೇರೆಗೆ ಮತ್ತು 1956ರ ರಾಜ್ಯ ಪುನರ್ ವಿಂಗಡನೆ ಅಧಿನಿಯಮದ 54ನೇ ಪ್ರಕರಣ ಅಥವಾ ಸಿವಿಲ್ ಪ್ರಕ್ರಿಯಾ ಸಂಹಿತೆಯ 122ನೇ ಪ್ರಕರಣದ ಅಥವಾ ಯಾವುದೇ ಕಾನೂನಿನ ಮೇರೆಗೆ ಕರ್ನಾಟಕ ಉಚ್ಚ ನ್ಯಾಯಾಲಯವು ಮಾಡಿದ ಯಾವುದೇ ನಿಯಮಗಳಿಗೆ ಸಂಬಂಧಿಸಿದಂತೆ ನ್ಯಾಯವಾದಿ ಅಥವಾ ಪ್ಲೀಡರನ ಮನ್ನಣೆ ಪಡೆದ ಕಾರಕೂನ ಅಥವಾ ಗುಮಾಸ್ತೆ ಎಂದು ನೋಂದಾಯಿತನಾದ ವ್ಯಕ್ತಿ;

(ಟ) "ಸ್ಟಾಂಪ್" ಎಂದರೆ, 22ನೇ ಪ್ರಕರಣದ ಮೇರೆಗೆ ಮುದ್ರಿಸಲಾದ ಮತ್ತು ಹಂಚಲಾದ ಸ್ಟಾಂಪು;

(ಠ) "ರಾಜ್ಯ" ಎಂದರೆ, ಕರ್ನಾಟಕ ರಾಜ್ಯ;

(ಡ) "ವೃತ್ತಿಯ ಅಮಾನತು" ಎಂದರೆ ಸ್ವ ಇಚ್ಛೆಯಿಂದ ನ್ಯಾಯವಾದಿಯಾಗಿ ವೃತ್ತಿಯನ್ನು ನಿಲ್ಲಿಸುವುದು ಅಥವಾ ದುರ್ನಡತೆಗಾಗಿ ಬಾರ್ ಕೌನ್ಸಿಲ್‌ನಿಂದ ಅಮಾನತುಗೊಳ್ಳುವುದು;

(ಢ) "ಟ್ರಸ್ಟೀ ಸಮಿತಿ" ಎಂದರೆ, 4ನೇ ಪ್ರಕರಣದ ಮೇರೆಗೆ ಸ್ಥಾಪನೆಯಾದ ಸಮಿತಿ;

(ಣ) "ವಕಾಲತ್ತು" ಎಂದರೆ ವಕಾಲತ್ತು ನಾಮೆ ಮತ್ತು ಯಾವುದೇ ನ್ಯಾಯಾಲಯ ನ್ಯಾಯಾಧೀಕರಣ ಅಥವಾ ಇತರೆ ಪ್ರಾಧಿಕಾರದ ಮುಂದೆ ಹಾಜರಾಗಲು ಮತ್ತು ವಾದಿಸಲು ನ್ಯಾಯವಾದಿಯನ್ನು ಶಕ್ತಗೊಳಿಸುವ ಹಾಜರಾತಿ ಪತ್ರ ಅಥವಾ ಯಾವುದೇ ಇತರ ದಸ್ತಾವೇಜನ್ನು ಅದು ಒಳಗೊಳ್ಳುತ್ತದೆ.

**3. ನ್ಯಾಯವಾದಿಗಳ ಕಲ್ಯಾಣ ನಿಧಿ.–** (1) ರಾಜ್ಯದಲ್ಲಿನ ನ್ಯಾಯವಾದಿಗಳಿಗೆ ನಿವೃತ್ತಿಯ ನಂತರದ ಪ್ರಯೋಜನಗಳನ್ನು ಸಂದಾಯ ಮಾಡುವುದಕ್ಕಾಗಿ, ರಾಜ್ಯ ಸರ್ಕಾರವು, ಕರ್ನಾಟಕ ನ್ಯಾಯವಾದಿಗಳ ಕಲ್ಯಾಣ ನಿಧಿ ಎಂದು ಕರೆಯಲಾಗುವ ನಿಧಿಯೊಂದನ್ನು ರಚಿಸತಕ್ಕದ್ದು.

(2) ಆ ನಿಧಿಗೆ,–

(ಕ) 12ನೇ ಪ್ರಕರಣದ ಮೇರೆಗೆ ಬಾರ್ ಕೌನ್ಸಿಲ್‌ನಿಂದ ಸಂದಾಯವಾದ ಎಲ್ಲಾ ಮೊಬಲಗುಗಳು;

(ಖ) ಬಾರ್ ಕೌನ್ಸಿಲ್‌ನಿಂದ ನೀಡಲಾದ ಯಾವುದೇ ಇತರ ವಂತಿಗೆ;

(ಗ) ಭಾರತದ ಬಾರ್ ಕೌನ್ಸಿಲ್, ಯಾವುದೇ ನ್ಯಾಯವಾದಿಗಳ ಸಂಘ, ಯಾವುದೇ ಇತರೆ ಸಂಘ ಅಥವಾ ಸಂಸ್ಥೆ, ಯಾವನೇ ನ್ಯಾಯವಾದಿ ಅಥವಾ ಇತರೆ ಯಾವನೇ ವ್ಯಕ್ತಿಯು ನಿಧಿಗೆ ಕೊಟ್ಟ ಯಾವುದೇ ಸ್ವಇಚ್ಛೆಯ ದೇಣಿಗೆ ಅಥವಾ ವಂತಿಗೆ;

(ಘ) ನಿಧಿಗೆ ರಾಜ್ಯ ಸರ್ಕಾರವು ಕೊಟ್ಟ ಯಾವುವೇ ಅನುದಾನ;

(ಙ) ನ್ಯಾಯವಾದಿ ವೃತ್ತಿಗೆ, ಸಾಮಾಜಿಕ ಭದ್ರತಾ ಕ್ರಮಗಳನ್ನು ಒದಗಿಸುವುದಕ್ಕಾಗಿ, 1958ರ ಕರ್ನಾಟಕ ನ್ಯಾಯಾಲಯ ಫೀಜು ಮತ್ತು ದಾವೆಗಳ ಮೌಲ್ಯ ನಿಗದಿ ಅಧಿನಿಯಮದ 1958ರ ಕರ್ನಾಟಕ ಅಧಿನಿಯಮ, 16) 76ನೇ ಪ್ರಕರಣದ ಮೇರೆಗೆ ರಚಿಸಲಾದ ಕಾನೂನು ಪ್ರಯೋಜನ ನಿಧಿಯಿಂದ ಪ್ರತ್ಯೇಕವಾಗಿ ಇಟ್ಟ ಮೊಬಲಗುಗಳು;

(ಚ) 10ನೇ ಪ್ರಕರಣದ ಮೇರೆಗೆ ಸಾಲವಾಗಿ ಪಡೆದ ಯಾವುದೇ ಮೊತ್ತ;

(ಛ) ಸಮೂಹ ವಿಮಾ ಪಾಲಿಸಿ ಮೇರೆಗೆ, ನ್ಯಾಯವಾದಿಯು, ನಿಧನವಾದ ಮೇಲೆ ಭಾರತ ಜೀವ ವಿಮಾ ನಿಗಮದಿಂದ ಪಡೆದ ಎಲ್ಲಾ ಮೊತ್ತಗಳು;

(ಜ) ನಿಧಿಯ ಸದಸ್ಯರ ಸಮೂಹ ವಿಮಾ ಪಾಲಿಸಿಗಳಿಗೆ ಸಂಬಂಧಿಸಿದಂತೆ ಭಾರತ ಜೀವ ವಿಮಾ ನಿಗಮದಿಂದ ಪಡೆದ ಯಾವುದೇ ಲಾಭ ಅಥವಾ ಡಿವಿಡೆಂಡ್;

(ಝ) ನಿಧಿಯ ಯಾವುದೇ ಭಾಗದಿಂದ ತೊಡಗಿಸಿದ ಯಾವುದೇ ಹೂಡಿಕೆಯ ಮೇಲಿನ ಯಾವುದೇ ಬಡ್ಡಿ ಅಥವಾ ಡಿವಿಡೆಂಡ್ ಅಥವಾ ಇತರ ಉತ್ಪತ್ತಿ;

(ಞ) 22ನೇ ಪ್ರಕರಣದ ಮೇರೆಗೆ ಕಲ್ಯಾಣ ನಿಧಿಯ ಸ್ಟಾಂಪುಗಳ ಮಾರಾಟ ಮೂಲಕ ಸಂಗ್ರಹಿಸಲಾದ ಎಲ್ಲಾ ಮೊತ್ತಗಳು;

(ಟ) ಅರ್ಜಿಗಳ ಫೀಜುಗಳು ಮತ್ತು ವಾರ್ಷಿಕ ಚಂದಾ ಮತ್ತು ಅವುಗಳ ಮೇಲಿನ ಬಡ್ಡಿಯ ಮೂಲಕ 15ನೇ ಪ್ರಕರಣದ ಮೇರೆಗೆ ಸಂಗ್ರಹಿಸಲಾದ ಎಲ್ಲಾ ಮೊತ್ತಗಳು;

(3) (2)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಮೊತ್ತಗಳನ್ನು ನಿಯಮಿಸಬಹುದಾದಂಥ ಏಜನ್ಸಿಗಳಿಗೆ ಅಂಥ ಕಾಲಾಂತರಗಳಲ್ಲಿ ಮತ್ತು ಅಂಥ ರೀತಿಯಲ್ಲಿ ಸಂದಾಯ ಮಾಡತಕ್ಕದ್ದು ಅಥವಾ ಅವುಗಳಿಂದ ಅಂಥ ಕಾಲಾಂತರಗಳಲ್ಲಿ ಮತ್ತು ಅಂಥ ರೀತಿಯಲ್ಲಿ ಸಂಗ್ರಹವಾಗತಕ್ಕದ್ದು ಮತ್ತು ನಿಧಿಯ ಲೆಕ್ಕಪತ್ರಗಳನ್ನು ಅಂಥ ರೀತಿಯಲ್ಲಿ ಇಡತಕ್ಕದ್ದು ಮತ್ತು ನಡೆಸತಕ್ಕದ್ದು.

**4. ಟ್ರಸ್ಟೀ ಸಮಿತಿಯ ಸ್ಥಾಪನೆ.–** (1) ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಅದರಲ್ಲಿ ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಿಂದ, ಜಾರಿಗೆ ಬರುವಂತೆ ಕರ್ನಾಟಕ ನ್ಯಾಯವಾದಿಗಳ ಕಲ್ಯಾಣ ನಿಧಿ ಟ್ರಸ್ಟೀ ಸಮಿತಿಯೆಂದು ಕರೆಯಲಾಗುವ ಸಮಿತಿಯನ್ನು ಸ್ಥಾಪಿಸಬಹುದು.

(2) ಟ್ರಸ್ಟೀ ಸಮಿತಿಯು ಸ್ವತ್ತನ್ನು ಆರ್ಜಿಸುವ ಮತ್ತು ಧಾರಣ ಮಾಡುವ ಅಧಿಕಾರದೊಂದಿಗೆ ಶಾಶ್ವತ ಉತ್ತರಾಧಿಕಾರ ಹಾಗೂ ಸಾಮಾನ್ಯ ಮುದ್ರೆಯನ್ನು ಹೊಂದಿರುವ ನಿಗಮಿತ ನಿಕಾಯವಾಗಿರತಕ್ಕದ್ದು ಮತ್ತು ಸದರಿ ಹೆಸರಿನಲ್ಲಿ ದಾವೆ ಹೂಡಬಹುದು ಅಥವಾ ದಾವೆಗೆ ಗುರಿಯಾಗಬಹುದು.

(3) ಟ್ರಸ್ಟೀ ಸಮಿತಿಯು,–

(ಕ) ಟ್ರಸ್ಟೀ ಸಮಿತಿಯ ಪದನಿಮಿತ್ತ ಅಧ್ಯಕ್ಷನಾಗಿರತಕ್ಕ ಕರ್ನಾಟಕ ಅಡ್ವೋಕೇಟ್ ಜನರಲ್;

(ಖ) ಸರ್ಕಾರಿ ಕಾರ್ಯದರ್ಶಿ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆ ಪದನಿಮಿತ್ತ;

(ಗ) ರಾಜ್ಯ ಸರ್ಕಾರವು ನಾಮನಿರ್ದೇಶಿಸಿದ ಇಬ್ಬರು ಸದಸ್ಯರು;

(ಘ) ಬಾರ್ ಕೌನ್ಸಿಲ್ ನಾಮನಿರ್ದೇಶನ ಮಾಡಿದ ಇಬ್ಬರು ಸದಸ್ಯರು,

(ಙ) ಟ್ರಸ್ಟೀ ಸಮಿತಿಯ ಪದನಿಮಿತ್ತ ಖಜಾಂಚಿ ಆಗಿರತಕ್ಕ ಬಾರ್ ಕೌನ್ಸಿಲ್‌ನ ಅಧ್ಯಕ್ಷ; ಮತ್ತು

(ಚ) ಟ್ರಸ್ಟೀ ಸಮಿತಿಯ ಪದನಿಮಿತ್ತ ಕಾರ್ಯದರ್ಶಿಯಾಗಿರತಕ್ಕ ಬಾರ್ ಕೌನ್ಸಿಲ್‌ನ ಕಾರ್ಯದರ್ಶಿ.

(4) (3)ನೇ ಉಪಪ್ರಕರಣದ (ಗ) ಖಂಡದ ಮೇರೆಗೆ ರಾಜ್ಯ ಸರ್ಕಾರವು ನಾಮನಿರ್ದೇಶನ ಮಾಡಿದ ಸದಸ್ಯನು ನಾಲ್ಕು ವರ್ಷಗಳ ಅವಧಿಯವರೆಗೆ ಪದಧಾರಣ ಮಾಡತಕ್ಕದ್ದು.

(5) (3)ನೇ ಉಪಪ್ರಕರಣದ (ಗ) ಖಂಡದ ಮೇರೆಗೆ ಬಾರ್ ಕೌನ್ಸಿಲ್ ನಾಮನಿರ್ದೇಶನ ಮಾಡಿದ ಸದಸ್ಯನು ನಾಲ್ಕು ವರ್ಷಗಳ ಅವಧಿಯವರೆಗೆ ಅಥವಾ ಬಾರ್ ಕೌನ್ಸಿಲ್‌ನಲ್ಲಿ ತನ್ನ ಸದಸ್ಯತ್ವವಿರುವವರೆಗೆ, ಇವುಗಳಲ್ಲಿ ಯಾವುದು ಕಡಿಮೆಯೋ, ಅಲ್ಲಿಯವರೆಗೆ ಪದಧಾರಣ ಮಾಡತಕ್ಕದ್ದು.

**5. ಟ್ರಸ್ಟೀ ಸಮಿತಿಯು ನಾಮನಿರ್ದೇಶಿತ ಸದಸ್ಯರ ಅನರ್ಹತೆ ಮತ್ತು ಅವರನ್ನು ತೆಗೆದು ಹಾಕುವುದು.–** (1) 4ನೇ ಪ್ರಕರಣದ (3)ನೇ ಉಪಪ್ರಕರಣದ (ಗ) ಖಂಡ ಅಥವಾ (ಘ) ಖಂಡದ ಮೇರೆಗೆ ನಾಮನಿರ್ದೇಶಿತನಾದ ಸದಸ್ಯನು,–

(ಕ) ಅಸ್ವಸ್ಥಚಿತ್ತನಾದರೆ; ಅಥವಾ

(ಖ) ದಿವಾಳಿ ಎಂದು ನ್ಯಾಯ ನಿರ್ಣೀತನಾದರೆ;

(ಗ) ಟ್ರಸ್ಟೀ ಸಮಿತಿಯ ಕ್ರಮಾನುಗತ ಮೂರು ಸಭೆಗಳಿಗಿಂತ ಹೆಚ್ಚಿನ ಸಭೆಗಳಿಗೆ ಅದರಿಂದ ಅನುಮತಿ ಪಡೆಯದೆ ಗೈರುಹಾಜರಾದರೆ ಅಥವಾ

(ಘ) ನಿಧಿಗೆ (ಅವನು ನಿಧಿಯ ಸದಸ್ಯನಾಗಿದ್ದ ಸಂದರ್ಭದಲ್ಲಿ) ಬಾಕಿದಾರನಾಗಿದ್ದರೆ ಅಥವಾ ನಂಬಿಕೆ ದ್ರೋಹ ಮಾಡಿದ್ದರೆ; ಅಥವಾ

(ಙ) ಸಕ್ಷಮ ನ್ಯಾಯಾಲಯವು ಅಂಥ ಅಪರಾಧ ನಿರ್ಣಯವನ್ನು ರದ್ದು ಮಾಡಿದ ಹೊರತು, ನೈತಿಕ ಪತನವನ್ನೊಳಗೊಂಡ ಅಪರಾಧಕ್ಕಾಗಿ ಕ್ರಿಮಿನಲ್ ನ್ಯಾಯಾಲಯವು ಅಪರಾಧಿಯೆಂದು, ನಿರ್ಣಯಿಸಿದ್ದರೆ–

– ಅವನು ಟ್ರಸ್ಟೀ ಸಮಿತಿಯ ಸದಸ್ಯನಾಗಿರಲು ಅನರ್ಹನಾಗತಕ್ಕದ್ದು,

(2) ರಾಜ್ಯ ಸರ್ಕಾರವು (1)ನೇ ಉಪಪ್ರಕರಣದ ಮೇರೆಗೆ ಅನರ್ಹನಾಗಿರುವ ನಾಮ ಅನರ್ಹನಾಗುವ ಯಾವನೇ ಸದಸ್ಯನನ್ನು ಟ್ರಸ್ಟೀ ಸಮಿತಿಯ ಸದಸ್ಯತ್ವದಿಂದ ತೆಗೆದು ಹಾಕಬಹುದು:

ಪರಂತು, ಯಾವನೇ ಸದಸ್ಯನನ್ನು ಅವನಿಗೆ ಮತ್ತು ಬಾರ್ ಕೌನ್ಸಿಲ್‌ನಿಂದ ಅಥವಾ ನಿರ್ದೇಶಿತನಾದ ಸದಸ್ಯನ ಸಂದರ್ಭದಲ್ಲಿ, ಬಾರ್ ಕೌನ್ಸಿಲ್‌ಗೆ, ಅಹವಾಲನ್ನು ಹೇಳಿ ಕೊಳ್ಳಲು ಯುಕ್ತ ಅವಕಾಶ ಕೊಟ್ಟ ಹೊರತು, ಯಾವುದೇ ಆದೇಶವನ್ನು ಮಾಡತಕ್ಕದ್ದಲ್ಲ.

**6. ಟ್ರಸ್ಟೀ ಸಮಿತಿಯ ನಾಮನಿರ್ದೇಶಿತ ಸದಸ್ಯರುಗಳ ರಾಜೀನಾಮೆ ಮತ್ತು ಆಕಸ್ಮಿಕ ಖಾಲಿ ಸ್ಥಾನಗಳನ್ನು ಭರ್ತಿ ಮಾಡುವುದು.–** (1) 4ನೇ ಪ್ರಕರಣದ (3)ನೇ ಉಪಪ್ರಕರಣದ (ಗ) ಖಂಡ ಅಥವಾ (ಘ) ಖಂಡದ ಮೇರೆಗೆ ನಾಮನಿರ್ದೇಶಿತನಾದ ಯಾವನೇ ಸದಸ್ಯನು ಸಂದರ್ಭಾನುಸಾರ, ರಾಜ್ಯ ಸರ್ಕಾರಕ್ಕೆ ಅಥವಾ ಬಾರ್ ಕೌನ್ಸಿಲ್‌ಗೆ ಬರಹದಲ್ಲಿ ಮೂರು ತಿಂಗಳು ನೋಟೀಸನ್ನು ಕೊಡುವ ಮೂಲಕ ತನ್ನ ಪದಕ್ಕೆ ರಾಜೀನಾಮೆಯನ್ನು ಕೊಡಬಹುದು ಮತ್ತು ರಾಜ್ಯ ಸರ್ಕಾರ ಅಥವಾ ಬಾರ್ ಕೌನ್ಸಿಲ್ ಅಂಥ ರಾಜೀನಾಮೆಯನ್ನು ಅಂಗೀಕರಿಸಿದ ಮೇಲೆ, ಅವನು ತನ್ನ ಪದವನ್ನು ಖಾಲಿ ಮಾಡಿದ್ದಾನೆಂದು ಭಾವಿಸತಕ್ಕದ್ದು;

ಪರಂತು, ಬಾರ್ ಕೌನ್ಸಿಲ್ ರಾಜೀನಾಮೆಯನ್ನು ಅಂಗೀಕರಿಸುವುದಕ್ಕೆ ಮೊದಲು, ರಾಜ್ಯ ಸರ್ಕಾರದೊಡನೆ ಸಮಾಲೋಚಿಸತಕ್ಕದ್ದು.

(2) (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಸದಸ್ಯನ ಪದದಲ್ಲಿ ಉಂಟಾದ ಆಕಸ್ಮಿಕ ಖಾಲಿ ಸ್ಥಾನವನ್ನು ಆದಷ್ಟು ಬೇಗನೆ ಸಂದರ್ಭನುಸಾರ ರಾಜ್ಯ ಸರ್ಕಾರ ಅಥವಾ ಬಾರ್ ಕೌನ್ಸಿಲ್ ಭರ್ತಿ ಮಾಡಬಹುದು ಮತ್ತು ಅಂಥ ಖಾಲಿ ಸ್ಥಾನವನ್ನು ತುಂಬಲು ಹಾಗೆ ನಾಮ ನಿರ್ದೇಶಿತನಾದ ಸದಸ್ಯನು, ಅವನನ್ನು ಯಾವ ಸದಸ್ಯನ ಸ್ಥಾನದಲ್ಲಿ ತುಂಬಲಾಗಿದೆಯೋ ಆ ಸದಸ್ಯನ ಪದದ ಉಳಿದ ಅವಧಿಯವರೆಗೆ, ಪದ ಧಾರಣ ಮಾಡತಕ್ಕದ್ದು.

**7. ಖಾಲಿ ಸ್ಥಾನ ನ್ಯೂನತೆ ಇತ್ಯಾದಿಗಳಿಂದ ಟ್ರಸ್ಟೀ ಸಮಿತಿಯ ಕಾರ್ಯವು ಅಸಿಂಧುವಾಗತಕ್ಕದ್ದಲ್ಲ.–** ಈ ಅಧಿನಿಯಮ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ ಮೇರೆಗೆ, ಟ್ರಸ್ಟೀ ಸಮಿತಿಯು ಮಾಡಿದ ಯಾವುದೇ ಕಾರ್ಯ ಅಥವಾ ಕೈಕೊಂಡ ಯಾವುದೇ ವ್ಯವಹಾರಣೆಯನ್ನು,–

(ಕ) ಸಮಿತಿಯ ರಚನೆಯಲ್ಲಿನ ಯಾವುದೇ ಖಾಲಿ ಸ್ಥಾನ ಅಥವಾ ನ್ಯೂನತೆ;

ಅಥವಾ

(ಖ) ಅದರ ಸದಸ್ಯನಾಗಿ ಯಾವನೇ ವ್ಯಕ್ತಿಯನ್ನು ನಾಮನಿರ್ದೇಶನ ಮಾಡುವುದರಲ್ಲಿನ ಯಾವುದೇ ನ್ಯೂನತೆ ಅಥವಾ ಅಕ್ರಮತೆ; ಅಥವಾ

(ಗ) ಪ್ರಕರಣದ ಗುಣಾವಗುಣಗಳಿಗೆ ಬಾಧಕವನ್ನುಂಟು ಮಾಡದ ಅಂಥ ಕಾರ್ಯ ಅಥವಾ ವ್ಯವಹರಣೆಯಲ್ಲಿನ ಯಾವುದೇ ನ್ಯೂನತೆ ಅಥವಾ ಅಕ್ರಮತೆ;

– ಇವುಗಳ ಕಾರಣದಿಂದ ಮಾತ್ರವೇ ಅಸಿಂಧುಗೊಳಿಸತಕ್ಕದ್ದಲ್ಲ.

**8. ನಿಧಿಯನ್ನು ನಿಹಿತಗೊಳಿಸುವುದ ಮತ್ತು ಅದರ ವಿನಿಯೋಗ.–** ಈ ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟು ಮತ್ತು ಅದರ ಉದ್ದೇಶಗಳಿಗಾಗಿ ನಿಧಿಯು ಟ್ರಸ್ಟೀ ಸಮಿತಿಯಲ್ಲಿ ನಿಹಿತವಾಗತಕ್ಕದ್ದು ಮತ್ತು ಆ ಸಮಿತಿಯು ಅದನ್ನು ಧಾರಣ ಮಾಡತಕ್ಕದ್ದು ಮತ್ತು ವಿನಿಯೋಗಿಸತಕ್ಕದ್ದು.

**9. ಟ್ರಸ್ಟೀ ಸಮಿತಿಯ ಪ್ರಕಾರ್ಯ.–** (1) ಟ್ರಸ್ಟೀ ಸಮಿತಿಯ ನಿಧಿಯ ವಹಿವಾಟನ್ನು ನಡೆಸತಕ್ಕದ್ದು.

(2) ನಿಧಿಯ ವಹಿವಾಟಿನಲ್ಲಿ ಈ ಅಧಿನಿಯಮದ ಉಪಬಂಧಗಳಿಗೆ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳಿಗೆ ಒಳಪಟ್ಟು ಟ್ರಸ್ಟೀ ಸಮಿತಿಯು,–

(ಕ) ನಿಧಿಗೆ ಸೇರಿದ ಮೊಬಲಗು ಮತ್ತು ಆಸ್ತಿಗಳನ್ನು ನ್ಯಾಸವಾಗಿ ಧಾರಣ ಮಾಡತಕ್ಕದ್ದು;

(ಖ) ನಿಧಿಗೆ ಸೇರಲು ಅಥವಾ ಪುನಃ ಸೇರಲು ಸಲ್ಲಿಸುವ ಅರ್ಜಿಗಳನ್ನು ಸ್ವೀಕರಿಸತತಕ್ಕದ್ದು ಮತ್ತು ಅಂಥ ಅರ್ಜಿಗಳನ್ನು ಸ್ವೀಕರಿಸಿದ ದಿನಾಂಕದಿಂದ ತೊಂಬತ್ತು ದಿನಗಳೊಳಗಾಗಿ ಅವುಗಳನ್ನು ವಿಲೆ ಮಾಡತಕ್ಕದ್ದು;

(ಗ) ನಿಧಿಯಿಂದ ಸಂದಾಯಗಳನ್ನು ಮಾಡುವುದಕ್ಕಾಗಿ ಸಂದರ್ಭಾನುಸಾರ ನಿಧಿಯ ಸದಸ್ಯರುಗಳಿಂದ, ಅವರ ನಾಮನಿರ್ದೇಶಿತರಿಂದ ಅಥವಾ ಕಾನೂನು ಸಮ್ಮತ ಪ್ರತಿನಿಧಿಗಳಿಂದ ಅರ್ಜಿಗಳನ್ನು ಸ್ವೀಕರಿಸತಕ್ಕದ್ದು, ಅಂಥ ಅರ್ಜಿಗಳನ್ನು ವಿಲೆ ಮಾಡುವುದಕ್ಕಾಗಿ ತಾನು ಅವಶ್ಯವೆಂದು ಭಾವಿಸುವಂಥ ವಿಚಾರಣೆಯನ್ನು ನಡೆಸತಕ್ಕದ್ದು ಹಾಗೂ ಅವುಗಳನ್ನು ಸ್ವೀಕರಿಸಿದ ದಿನಾಂಕದಿಂದ ಐದು ತಿಂಗಳುಗಳೊಳಗಾಗಿ ವಿಲೆ ಮಾಡತಕ್ಕದ್ದು.

(ಘ) ಅರ್ಜಿಗಳ ಮೇಲಿನ ಅದರ ತೀರ್ಮಾನಗಳನ್ನು ಟ್ರಸ್ಟೀ ಸಮಿತಿಯ ನಡುವಳಿಕೆ ಪುಸ್ತಕದಲ್ಲಿ ದಾಖಲು ಮಾಡತಕ್ಕದ್ದು;

(ಙ) ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ದರಗಳಲ್ಲಿ ಮೊಬಲಗುಗಳನ್ನು ಅರ್ಜಿದಾರರಿಗೆ ಸಂದಾಯ ಮಾಡತಕ್ಕದ್ದು;

(ಚ) ನಿಯಮಿಸಬಹುದಾದಂಥ ನಿಯತಕಾಲಿಕ ಮತ್ತು ವಾರ್ಷಿಕ ವರದಿಗಳನ್ನು ರಾಜ್ಯ ಸರ್ಕಾರಕ್ಕೆ ಮತ್ತು ಬಾರ್ ಕೌನ್ಸಿಲ್‌ಗೆ ಕಳಿಸತಕ್ಕದ್ದು:

(ಛ) ನಿಧಿಗೆ ಸೇರಲು ಅಥವಾ ಪುನಃ ಸೇರಲು ಅಥವಾ ನಿಧಿಯ ಪ್ರಯೋಜನದ ಕ್ಲೇಮುಗಳಿಗೆ ಸಂಬಂಧಿಸಿದಂತೆ ಅರ್ಜಿಗಳ ಬಗ್ಗೆ ಟ್ರಸ್ಟೀ ಸಮಿತಿಯ ತೀರ್ಮಾನಗಳನ್ನು ನೋಂದಾಯಿತ ಅಂಚೆಯ ಮೂಲಕ ತಲುಪೊಪ್ಪಿಗೆಯೊಂದಿಗೆ ಅರ್ಜಿದಾರರಿಗೆ ತಿಳಿಸತಕ್ಕದ್ದು.

(ಜ) ಈ ಅಧಿನಿಯಮ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳ ಮೇರೆಗೆ ಮಾಡಬೇಕಾದ ಅಥವಾ ಮಾಡಬಹುದಾದಂಥ ಇತರೆ ಕಾರ್ಯಗಳನ್ನು ಮಾಡತಕ್ಕದ್ದು;

**10. ಸಾಲ ತೆಗೆದು ಕೊಳ್ಳುವುದು ಮತ್ತು ಹೂಡಿಕೆ.–** (1) ಟ್ರಸ್ಟೀ ಸಮಿತಿಯು, ರಾಜ್ಯ ಸರ್ಕಾರದ ಮತ್ತು ಬಾರ್ ಕೌನ್ಸಿಲ್‍ನ ಪೂರ್ವಾನುಮತಿಯನ್ನು ಪಡೆದು, ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ಅಗತ್ಯವಾದ ಯಾವುದೇ ಮೊತ್ತವನ್ನು ಕಾಲಕಾಲಕ್ಕೆ ಸಾಲವಾಗಿ ತೆಗೆದುಕೊಳ್ಳಬಹುದು.

(2) ಟ್ರಸ್ಟೀ ಸಮಿತಿಯು, ನಿಧಿಯ ಭಾಗವಾಗಿರುವ ಎಲ್ಲಾ ಹಣ ಮತ್ತು ಸ್ವೀಕೃತಗಳನ್ನು ಯಾವುದೇ ಅನುಸೂಚಿತ ಬ್ಯಾಂಕಿನಲ್ಲಿ, ಠೇವಣಿ ಇಡತಕ್ಕದ್ದು ಅಥವಾ ಅದನ್ನು ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರದ ಒಡೆತನದಲ್ಲಿರುವ ಅಥವಾ ನಿಯಂತ್ರಣದಲ್ಲಿರುವ ಯಾವುದೇ ನಿಗಮಕ್ಕೆ ಸಾಲಗಳನ್ನು ಕೊಡುವ ಅಥವಾ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರವು ಎತ್ತುವ ಸಾಲಗಳ ರೂಪದಲ್ಲಿ ಅಥವಾ ಬಾರ್ ಕೌನ್ಸಿಲ್, ರಾಜ್ಯ ಸರ್ಕಾರದ ಪೂರ್ವಾನುಮತಿಯೊಂದಿಗೆ ಕಾಲಕಾಲಕ್ಕೆ ನಿರ್ದೇಶಿಸಬಹುದಾದ ಇತರ ಯಾವುದೇ ರೀತಿಯಲ್ಲಿ ಹೂಡತಕ್ಕದ್ದು.

(3) ಈ ಅಧಿನಿಯಮದ ಮೇರೆಗೆ ಬಾಕಿ ಇರುವ ಮತ್ತು ಸಂದಾಯ ಮಾಡಬೇಕಾದ ಎಲ್ಲಾ ಮೊಬಲಗುಗಳನ್ನು ಮತ್ತು ನಿಧಿಯ ನಿರ್ವಹಣೆ ಮತ್ತು ಆಡಳಿತಕ್ಕೆ ಸಂಬಂಧಪಟ್ಟ ಎಲ್ಲಾ ವೆಚ್ಚಗಳನ್ನು ನಿಧಿಯಿಂದ ಸಂದಾಯ ಮಾಡತಕ್ಕದ್ದು.

(4) ಟ್ರಸ್ಟೀ ಸಮಿತಿಯ ಲೆಕ್ಕಪತ್ರಗಳನ್ನು ಬಾರ್ ಕೌನ್ಸಿಲ್‍ನಿಂದ ನೇಮಕಗೊಂಡ ಚಾರ್ಟರ್ಡ್ ಅಕೌಂಟೆಂಟನು ಪ್ರತಿ ವರ್ಷವೂ ಲೆಕ್ಕ ಪರಿಶೋಧನೆ ಮಾಡತಕ್ಕದ್ದು.

(5) ಲೆಕ್ಕಪರಿಶೋಧಕನು ಪ್ರಮಾಣೀಕರಿಸಿದ ಟ್ರಸ್ಟೀ ಸಮಿತಿಯ ಲೆಕ್ಕಪತ್ರಗಳನ್ನು ಅದರ ಮೇಲಿನ ಲೆಕ್ಕಪರಿಶೋಧನೆಯ ವರದಿಗಳೊಂದಿಗೆ ಟ್ರಸ್ಟೀ ಸಮಿತಿಯು ಬಾರ್ ಕೌನ್ಸಿಲ್‍ಗೆ ಕಳಿಸತಕ್ಕದ್ದು ಮತ್ತು ಬಾರ್ ಕೌನ್ಸಿಲ್ ಅದಕ್ಕೆ ಸಂಬಂಧಿಸಿದಂತೆ ತಾನು ಸೂಕ್ತವೆಂದು ಭಾವಿಸಬಹುದಾದಂಥ ನಿರ್ದೇಶಗಳನ್ನು ಟ್ರಸ್ಟೀ ಸಮಿತಿಗೆ ಕೊಡಬಹುದು.

(6) ಟ್ರಸ್ಟೀ ಸಮಿತಿಯು (5)ನೇ ಉಪಪ್ರಕರಣದ ಮೇರೆಗೆ ಬಾರ್ ಕೌನ್ಸಿಲ್ ಹೊರಡಿಸಿದ ನಿರ್ದೇಶನಗಳನ್ನು ಪಾಲಿಸತಕ್ಕದ್ದು.

**11. ಕಾರ್ಯದರ್ಶಿಯ ಅಧಿಕಾರಗಳು ಮತ್ತು ಕರ್ತವ್ಯಗಳು.–** ಟ್ರಸ್ಟೀ ಸಮಿತಿಯ ಕಾರ್ಯದರ್ಶಿಯು.–

(ಕ) ಟ್ರಸ್ಟೀ ಸಮಿತಿಯ ಮುಖ್ಯ ಕಾರ್ಯನಿರ್ವಾಹಕ ಪ್ರಾಧಿಕಾರಿಯಾಗಿರತಕ್ಕದ್ದು ಮತ್ತು ಅದರ ತೀರ್ಮಾನಗಳನ್ನು ಕಾರ್ಯರೂಪಕ್ಕೆ ತರಲು ಜವಾಬ್ದಾರನಾಗಿರತಕ್ಕದ್ದು;

(ಖ) ಟ್ರಸ್ಟೀ ಸಮಿತಿಯ ಪರವಾಗಿ ಮತ್ತು ಅದರ ವಿರುದ್ಧವಾಗಿ ಹೂಡಿರುವ ಎಲ್ಲಾ ದಾವೆಗಳು ಮತ್ತು ವ್ಯವಹರಣೆಗಳಲ್ಲಿ ಅದನ್ನು ಪ್ರತಿನಿಧಿಸತಕ್ಕದ್ದು;

(ಗ) ತನ್ನ ಸಹಿ ಮೂಲಕ ಟ್ರಸ್ಟೀ ಸಮಿತಿಯ ಎಲ್ಲಾ ತೀರ್ಮಾನಗಳು ಮತ್ತು ಅನುದೇಶಗಳನ್ನು ಅಧಿಪ್ರಮಾಣಿಸತಕ್ಕದ್ದು;

(ಘ) ಖಜಾಂಚಿಯೊಂದಿಗೆ ಜಂಟಿಯಾಗಿ ಟ್ರಸ್ಟೀ ಸಮಿತಿಯ ಬ್ಯಾಂಕ್ ಲೆಕ್ಕಗಳನ್ನು ನಿರ್ವಹಿಸತಕ್ಕದ್ದು;

(ಙ) ಟ್ರಸ್ಟೀ ಸಮಿತಿಯ ಸಭೆಗಳನ್ನು ಕರೆಯತಕ್ಕದ್ದು ಮತ್ತು ಅದರ ನಡುವಳಿಕೆಗಳನ್ನು ತಯಾರಿಸತಕ್ಕದ್ದು;

(ಚ) ಅವಶ್ಯವಾದ ಎಲ್ಲಾ ದಾಖಲೆಗಳು ಮತ್ತು ಮಾಹಿತಿಗಳೊಂದಿಗೆ ಟ್ರಸ್ಟೀ ಸಮಿತಿಯ ಸಭೆಗಳಿಗೆ ಹಾಜರಾಗತಕ್ಕದ್ದು;

(ಛ) ಕಾಲಕಾಲಕ್ಕೆ ನಿಯಮಿಸಬಹುದಾದಂಥ ನಮೂನೆಗಳು, ರಿಜಿಸ್ಟರುಗಳು ಮತ್ತು ಇತರೆ ದಾಖಲೆಗಳನ್ನು ನಿರ್ವಹಿಸತಕ್ಕದ್ದು ಮತ್ತು ಟ್ರಸ್ಟೀ ಸಮಿತಿಗೆ ಸಂಬಂಧಪಟ್ಟ ಎಲ್ಲಾ ಪತ್ರ ವ್ಯವಹಾರಗಳನ್ನು ನಡೆಸತಕ್ಕದ್ದು;

(ಜ) ಸ್ಟಾಂಪುಗಳಿಗೆ ಸಂಬಂಧಪಟ್ಟಂತೆ ನ್ಯಾಯವಾದಿಗಳ ಸಂಘಗಳ ಲೆಕ್ಕಪತ್ರಗಳನ್ನು ಮತ್ತು ರಿಜಿಸ್ಟರುಗಳನ್ನು ನಿಯತಕಾಲಿಕವಾಗಿ ಪರಿಶೀಲಿಸತಕ್ಕದ್ದು ಮತ್ತು ಸರಿ ನೋಡತಕ್ಕದ್ದು;

(ಝ) ಪ್ರತಿ ಹಣಕಾಸು ವರ್ಷದಲ್ಲಿ, ಟ್ರಸ್ಟೀ ಸಮಿತಿಯು ವ್ಯವಹರಿಸಿದ ಕಾರ್ಯಕಲಾಪಗಳ ವಾರ್ಷಿಕ ವಿವರಹಣೆಯನ್ನು ತಯಾರಿಸತಕ್ಕದ್ದು: ಮತ್ತು

(ಞ) ಟ್ರಸ್ಟೀ ಸಮಿತಿಯು ನಿರ್ದೇಶಿಸಬಹುದಾದಂಥ ಇತರೆ ಕಾರ್ಯಕ್ರಮಗಳನ್ನು ಮಾಡತಕ್ಕದ್ದು.

**12. ನಿಧಿಗೆ ಗೊತ್ತುಪಡಿಸಿ ಹಣದ ವರ್ಗಾವಣೆ.–** ಬಾರ್ ಕೌನ್ಸಿಲ್ ತಾನು ವಸೂಲಿ ಮಾಡಿದ ಸದಸ್ಯತ್ವ ಫೀಜಿನ ಶೇಕಡಾ ಇಪ್ಪತ್ತು ಭಾಗಕ್ಕೆ ಸಮನಾದ ಮೊತ್ತವನ್ನು ಪ್ರತಿ ವರ್ಷವೂ ನಿಧಿಗೆ ಸಂದಾಯ ಮಾಡತಕ್ಕದ್ದು.

**13. ನ್ಯಾಯವಾದಿ ಸಂಘಗಳ ಮಾನ್ಯತೆ ಮತ್ತು ನೋಂದಣಿ,–** (1) ಯಾವುದೇ ನ್ಯಾಯಾಲಯದ ಕೇಂದ್ರದಲ್ಲಿ ಯಾವುದೇ ಹೆಸರಿನಿಂದ ಕರೆಯಲಾಗುವ ನ್ಯಾಯವಾದಿಗಳ ಎಲ್ಲಾ ಸಂಘಗಳು, ಈ ಬಗ್ಗೆ ಬಾರ್ ಕೌನ್ಸಿಲ್ ಅಧಿಸೂಚಿಸಬೇಕಾದ ದಿನಾಂಕಕ್ಕೆ ಮುಂಚೆ, ಮಾನ್ಯತೆ ಮತ್ತು ನೋಂದಣಿಗಾಗಿ ನಿಯಮಿಸಬಹುದಾದಂಥ ನಮೂನೆಯಲ್ಲಿ ಬಾರ್ ಕೌನ್ಸಿಲ್‌ಗೆ ಅರ್ಜಿ ಹಾಕಿಕೊಳ್ಳತಕ್ಕದ್ದು.

(2) ಮಾನ್ಯತೆ ಮತ್ತು ನೋಂದಣಿಗಾಗಿನ ಪ್ರತಿಯೊಂದು ಅರ್ಜಿಯು ಸಂಘದ ನಿಯಮಗಳು ಅಥವಾ ಉಪವಿಧಿಗಳು ಸಂಘದ ಪದಾಧಿಕಾರಿಗಳು ಹೆಸರುಗಳು ಹಾಗೂ ವಿಳಾಸಗಳು ಮತ್ತು ಹೆಸರು, ವಿಳಾಸ, ವಯಸ್ಸು, ಸದಸ್ಯತ್ವ ಪಡೆದ ದಿನಾಕ ಇವುಗಳನ್ನು ತೋರಿಸಿರುವ ಅಂದಿನವರೆಗಿನ ಸಂಘದ ಸದಸ್ಯರ ಪಟ್ಟಿ ಹಾಗೂ ಪ್ರತಿಯೊಬ್ಬ ಸದಸ್ಯನ ವೃತ್ತಿಯ ಸಾಮಾನ್ಯ ಸ್ಥಳ–ಇವುಗಳನ್ನು ಒಳಗೊಂಡಿರತಕ್ಕದ್ದು.

(3) ಬಾರ್ ಕೌನ್ಸಿಲ್ ತಾನು ಅಗತ್ಯವೆಂದು ಭಾವಿಸುವಂಥ ವಿಚಾರಣೆಯ ತರುವಾಯ, ನ್ಯಾಯವಾದಿಗಳ ಸಂಘವನ್ನು ಮಾನ್ಯ ಮಾಡಬಹುದು ಮತ್ತು ನಿಯಮಿಸಬಹುದಾದಂಥ ನಮೂನೆಯಲ್ಲಿ ನೋಂದಣಿಯ ಪ್ರಮಾಣ ಪತ್ರವನ್ನು ನೀಡಬಹುದು.

(4) ನ್ಯಾಯವಾದಿಗಳ ಸಂಘದ ಮಾನ್ಯತೆ ಮತ್ತು ನೋಂದಣಿಯ ಬಗ್ಗೆ ಬಾರ್ ಕೌನ್ಸಿಲ್‌ನ ತೀರ್ಮಾನವು ಅಂತಿಮವಾಗಿರತಕ್ಕದ್ದು.

(5) ನಿಯಮಿಸಬಹುದಾದಂಥ ನಿಯಮಗಳು ಮತ್ತು ಷರತ್ತುಗಳಿಗೆ ಒಳಪಟ್ಟು ಪ್ರತಿ ವರ್ಷವು, ಪ್ರತಿಯೊಂದು ನೋಂದಾಯಿತ ನ್ಯಾಯವಾದಿ ಸಂಘಕ್ಕೆ ಅನುದಾನಗಳನ್ನು ಸಂದಾಯ ಮಾಡಬಹುದು.

**14. ನ್ಯಾಯವಾದಿ ಸಂಘಗಳ ಕರ್ತವ್ಯಗಳು.–** (1) ಪ್ರತಿಯೊಂದು ನ್ಯಾಯವಾದಿ ಸಂಘವು ಪ್ರತಿ ವರ್ಷ ಏಪ್ರಿಲ್ 30 ರಂದು ಅಥವಾ ಅದಕ್ಕಿಂತ ಮುಂಚೆ, ಆ ವರ್ಷದ ಮಾರ್ಚ್ 31ರಂದು ಇದ್ದಂತೆ ತನ್ನ ಸದಸ್ಯರುಗಳ ಪಟ್ಟಿಯನ್ನು ಬಾರ್‌ಕೌನ್ಸಿಲ್‌ಗೆ ತಿಳಿಸತಕ್ಕದ್ದು.

(2) ಪ್ರತಿಯೊಂದು ನ್ಯಾಯವಾದಿ ಸಂಘವು.–

(ಕ) ಸಂಘದ ಪದಾಧಿಕಾರಿಗಳಲ್ಲದ ಯಾವುದೇ ಬದಲಾವಣೆಯನ್ನು ಬದಲಾವಣೆಯಾದಂದಿನಿಂದ ಹದಿನೈದು ದಿನದೊಳಗಾಗಿ;

(ಖ) ಪ್ರವೇಶ ಅಥವಾ ಮರು ಪ್ರವೇಶವೂ ಸೇರಿದಂತೆ ಸದಸ್ಯತ್ವದಲ್ಲಾದ ಯಾವುದೇ ಬದಲಾವಣೆಯನ್ನು ಅಂಥ ಬದಲಾವಣೆಯಾದಂದಿನಿಂದ ಮೂವತ್ತು ದಿನಗಳೊಳಗಾಗಿ;

(ಗ) ತನ್ನ ಸದಸ್ಯರಲ್ಲಿ ಯಾರಾದರೂ ನಿಧನರಾದರೆ, ನಿವೃತ್ತನಾದರೆ ಅಥವಾ ಸ್ವಇಚ್ಛೆಯಿಂದ ವೃತ್ತಿಯನ್ನು ನಿಲ್ಲಿಸಿದ್ದರೆ ಅದನ್ನು, ಅದು ಸಂಭವಿಸಿದ ದಿನಾಂಕದಿಂದ ಮೂವತ್ತು ದಿನಗಳೊಳಗೆ, ಮತ್ತು

(ಘ) ಬಾರ್ ಕೌನ್ಸಿಲ್ ಅಥವಾ ಸರ್ಕಾರವು ಕಾಲಕಾಲಕ್ಕೆ ಅಗತ್ಯಪಡಿಸಬಹುದಾದಂಥ ಇತರೆ ವಿಷಯವನ್ನು,

– ಬಾರ್ ಕೌನ್ಸಿಲ್‌ಗೆ ತಿಳಿಸತಕ್ಕದ್ದು.

**15. ನಿಧಿಯ ಸದಸ್ಯತ್ವ.–** (1) ರಾಜ್ಯದ ಯಾವುದೇ ನ್ಯಾಯಾಲಯದಲ್ಲಿ ವೃತ್ತಿ ನಿರತನಾಗಿರುವ ಮತ್ತು ನ್ಯಾಯವಾದಿಗಳ ಸಂಘದ ಸದಸ್ಯನಾಗಿರುವ, ಪ್ರತಿಯೊಬ್ಬ ನ್ಯಾಯವಾದಿಯು ನಿಯಮಿಸಬಹುದಾದಂಥ ನಮೂನೆಯಲ್ಲಿ ನಿಧಿಯ ಸದಸ್ಯನಾಗಿ ಪ್ರವೇಶ ಪಡೆಯಲು ಟ್ರಸ್ಟೀ ಸಮಿತಿಗೆ ಅರ್ಜಿಸಲ್ಲಿಸಬಹುದು.

(2) (1)ನೇ ಉಪಪ್ರಕರಣದ ಮೇರೆಗೆ ಅರ್ಜಿಯ, ಸ್ವೀಕರಿಸಿದ ಮೇಲೆ ಟ್ರಸ್ಟೀ ಸಮಿತಿಯು, ತಾನು ಅವಶ್ಯವೆಂದು ಭಾವಿಸುವಂಥ ವಿಚಾರಣೆಯನ್ನು ನಡೆಸತಕ್ಕದ್ದು ಮತ್ತು ಅರ್ಜಿದಾರನನ್ನು ನಿಧಿಗೆ ಸೇರಿಸಿ ಕೊಳ್ಳಬಹುದು ಅಥವಾ ಬರಹದಲ್ಲಿ ದಾಖಲು ಮಡಬೇಕಾದ ಕಾರಣಗಳಿಗಾಗಿ ಅರ್ಜಿಯನ್ನು ತಿರಸ್ಕರಿಸಬಹುದು:

ಪರಂತು, ಅರ್ಜಿದಾರನಿಗೆ ಅಹವಾಲನ್ನು ಹೇಳಿಕೊಳ್ಳಲು ಅವಕಾಶವನ್ನು ಕೊಟ್ಟಹೊರತು, ಅರ್ಜಿಯನ್ನು ತಿರಸ್ಕರಿಸುವ ಯಾವುದೇ ಆದೇಶವನ್ನು ಮಾಡತಕ್ಕದ್ದಲ್ಲ.

(3) ಪ್ರತಿಯೊಬ್ಬ ಅರ್ಜಿದಾರನು, ಟ್ರಸ್ಟೀ ಸಮಿತಿ ಲೆಕ್ಕಕ್ಕೆ ಒಂದು ವರ್ಷದಲ್ಲಿ, ಇನ್ನೂರು ರೂಪಾಯಿಗಳ ಅರ್ಜಿ ಫೀಜನ್ನು, ಅರ್ಜಿಯೊಂದಿಗೆ ಸಂದಾಯ ಮಾಡಬೇಕಾದ ಮೊದಲನೆ ಕಂತೂ ಸೇರಿ, ನಾಲ್ಕು ಸಮ ಕಂತುಗಳಲ್ಲಿ, ನಿಯಮಿಸಬಹುದಾದಂಥ ರೀತಿಯಲ್ಲಿ ಸಂದಾಯ ಮಾಡತಕ್ಕದ್ದು.

(4) ಅರ್ಜಿಯನ್ನು ತಿರಸ್ಕರಿಸಿದ ಸಂದರ್ಭದಲ್ಲಿ ಅರ್ಜಿಯೊಂದಿಗೆ ಸಂದಾಯ ಮಾಡಿದ ಮೊದಲನೆ ಕಂತಿನ ಫೀಜನ್ನು ಅರ್ಜಿದಾರನಿಗೆ ಮರು ಪಾವತಿ ಮಾಡತಕ್ಕದ್ದು.

(5) ಪ್ರತಿಯೊಬ್ಬ ಸದಸ್ಯನು ನಿಧಿಗೆ ವಾರ್ಷಿಕ ಚಂದಾವನ್ನು ಪ್ರತಿ ವರ್ಷದ ಅಕ್ಟೋಬರ್ 30ನೇ ದಿನಾಂಕದಂದು ಅಥವಾ ಅದಕ್ಕಿಂತ ಮುಂಚೆ, ಈ ಕೆಳಕಂಡ ದರಗಳಲ್ಲಿ ಸಂದಾಯ ಮಾಡತಕ್ಕದ್ದು, ಎಂದರೆ,–

(ಕ) ನ್ಯಾಯವಾದಿ ವರ್ಗದಲ್ಲಿ ನ್ಯಾಯವಾದಿಯ ಕಾಲಾವಧಿಯು ಐದು ವರ್ಷಗಳು ಅಥವಾ ಅದಕ್ಕಿಂತ ಹೆಚ್ಚಿಗೆ ಆದರೆ ಹದಿನೈದು ವರ್ಷಗಳಿಗಿಂತ ಕಡಿಮೆ ಇದ್ದರೆ ಐವತ್ತು ರೂಪಾಯಿಗಳು,

(ಖ) ನ್ಯಾಯವಾದಿ ವರ್ಗದಲ್ಲಿ ನ್ಯಾಯವಾದಿಯ ಕಾಲಾವಧಿಯು ಹದಿನೈದು ವರ್ಷಗಳು ಅಥವಾ ಅದಕ್ಕಿಂತ ಹೆಚ್ಚಿಗೆ ಇದ್ದರೆ–––– ಒಂದು ನೂರು ರೂಪಾಯಿಗಳು.

(6) (5)ನೇ ಉಪಪ್ರಕರಣದ ಮೇರೆಗೆ ಸದಸ್ಯನು ಚಂದಾವನ್ನು ತನ್ನ ಆಯ್ಕೆಯಂತೆ ಎರಡು ಸಮಾನ ಕಂತುಗಳಲ್ಲಿ ಸಂದಾಯ ಮಾಡಬಹುದು.

(7) ಯಾವ ಸದಸ್ಯನು ಯಾವುದೇ ವರ್ಷಕ್ಕಾಗಿ, ಆ ವರ್ಷದ ಅಕ್ಟೋಬರ್ 30ಕ್ಕೆ ಮುಂಚೆ ವಾರ್ಷಿಕ ಚಂದಾವನ್ನು ಇರಸಾಲು ಮಾಡಲು ವಿಫಲನಾಗುವನೋ ಆ ಯಾವನೇ ಸದಸ್ಯನ ನಿಧಿಯ ಸದಸ್ಯತ್ವದಿಂದ ತೆಗೆದು ಹಾಕುವುದಕ್ಕೆ ಗುರಿಯಾಗತಕ್ಕದ್ದು.

(8) (7)ನೇ ಉಪಪ್ರಕರಣದ ಮೇರೆಗೆ ನಿಧಿಯ ಸದಸ್ಯತ್ವದಿಂದ ತೆಗೆದುಹಾಕಲಾದ ವ್ಯಕ್ತಿಯನ್ನು, ತೆಗೆದು ಹಾಕಿದ ದಿನಾಂಕದಿಂದ ಆರು ತಿಂಗಳೊಳಗಾಗಿ ಬಾಕಿಯನ್ನು ವರ್ಷ ಒಂದಕ್ಕೆ ಶೇಕಡಾ ಹನ್ನೆರಡರ ಬಡ್ಡಿಯೊಂದಿಗೆ, ಸಂದಾಯ ಮಾಡಿದ ಮೇಲೆ ನಿಧಿಗೆ ಪುನಃ ಸೇರಿಸತಕ್ಕದ್ದು.

(9) ಪ್ರತಿಯೊಬ್ಬ ಸದಸ್ಯನು, ನಿಧಿಯ ಸದಸ್ಯತ್ವಕ್ಕೆ ಪ್ರವೇಶ ಪಡೆಯುವ ಕಾಲದಲ್ಲಿ, ಅವನಿಗೆ ಮೊಬಲಗನ್ನು ಸಂದಾಯ ಮಾಡುವುದಕ್ಕಿಂತ ಮೊದಲೇ ಅವನು ನಿಧನ ಹೊಂದಿದ ಸಂದರ್ಭದಲ್ಲಿ ನಿಧಿಯಿಂದ

ಅವನಿಗೆ ಬಾಕಿಯಾದ ಮೊಬಲಗನ್ನು ಸ್ವೀಕರಿಸುವ ಹಕ್ಕನ್ನು ತನ್ನ ಒಬ್ಬ ಅಥವಾ ಅದಕ್ಕಿಂತ ಹೆಚ್ಚಿನ ಅವಲಂಬಿತರಿಗೆ ಪ್ರಧಾನ ಮಾಡುವ ಮೂಲಕ ನಾಮ ನಿರ್ದೇಶನವನ್ನು ಮಾಡತಕ್ಕದ್ದು.

(10) ಸದಸ್ಯನು (9)ನೇ ಉಪಪ್ರಕರಣದ ಮೇರೆಗೆ ಒಬ್ಬನಿಗಿಂತ ಹೆಚ್ಚಿನ ವ್ಯಕ್ತಿಗಳನ್ನು ನಾಮ ನಿರ್ದೇಶಿಸಿದರೆ, ಅವನು ತನಗೆ ಬಾಕಿಯಾದ ಪೂರ್ಣ ಮೊಬಲಗನ್ನು ಒಳಗೊಳ್ಳುವಂಥ ರೀತಿಯಲ್ಲಿ ಪ್ರತಿಯೊಬ್ಬ ನಾಮನಿರ್ದೇಶಿತ ವ್ಯಕ್ತಿಗೆ ಸಂದಾಯವಾಗಬೇಕಾದ ಮೊಬಲಗು ಅಥವಾ ಭಾಗವನ್ನು ಆ ನಾಮನಿರ್ದೇಶನದಲ್ಲಿ ನಿರ್ದಿಷ್ಟಪಡಿಸತಕ್ಕದ್ದು.

(11) ಸದಸ್ಯನು ಟ್ರಸ್ಟೀ ಸಮಿತಿಗೆ, ಬರಹದಲ್ಲಿ ನೋಟೀಸನ್ನು ಕಳಿಸುವ ಮೂಲಕ ಯಾವುದೇ ಕಾಲದಲ್ಲಿ ನಾಮನಿರ್ದೇಶನವನ್ನು ರದ್ದುಗೊಳಿಸಬಹುದು, ಪರಂತು, ಅಂಥ ನೋಟೀಸಿನೊಂದಿಗೆ ಅವನು ಹೊಸ ನಾಮನಿರ್ದೇಶನವನ್ನು ಕಳುಹಿಸತಕ್ಕದ್ದು.

(12) ಸ್ವಇಚ್ಛೆಯಿಂದ ವೃತ್ತಿಯನ್ನು ನಿಲ್ಲಿಸುವ ಅಥವಾ ನಿವೃತ್ತನಾದ ಪ್ರತಿಯೊಬ್ಬ ಸದಸ್ಯನು, ಅಂಥ ನಿಲ್ಲಿಸುವಿಕೆ ಅಥವಾ ನಿವೃತ್ತಿಯಾದ ಹದಿನೈದು ದಿನಗಳೊಳಗಾಗಿ ಆ ಸಂಗತಿಯನ್ನು ಟ್ರಸ್ಟೀ ಸಮಿತಿಗೆ ತಿಳಿಸತಕ್ಕದ್ದು ಮತ್ತು ಯಾವನೇ ಸದಸ್ಯನು ಸಾಕಷ್ಟು ಸಕಾರಣವಿಲ್ಲದೇ ಹಾಗೆ ಮಾಡಲು ವಿಫಲನಾದರೆ ಟ್ರಸ್ಟೀ ಸಮಿತಿಯು, ನಿಯಮಿಸಬಹುದುದಾದಂಥ ತತ್ವಗಳಿಗೆ ಅನುಸಾರವಾಗಿ, ಆ ಸದಸ್ಯನಿಗೆ ಬಾಕಿಯಾಗುವ ಮೊಬಲಗನ್ನು ಕಡಿಮೆ ಮಾಡಬಹುದು.

**16. ವೃತ್ತಿಯು ಸಮಾಪ್ತಿಯಾದ ಮೇಲೆ ನಿಧಿಯಿಂದ ಸಂದಾಯ:–** (1) ನಿಧಿಯ ಸದಸ್ಯನ ವೃತ್ತಿಯು ಸಮಾಪ್ತವಾದ ಮೇಲೆ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ದರದಲ್ಲಿ ಮೊಬಲಗನ್ನು ನಿಧಿಯಿಂದ ಸ್ವೀಕರಿಸಲು ಅವನು ಹಕ್ಕುಳ್ಳವನಾಗಿರತಕ್ಕದ್ದು.

(2) ಸದಸ್ಯನು ನಿಧನ ಹೊಂದಿದ ಸಂದರ್ಭದಲ್ಲಿ, ಮೊಬಲಗನ್ನು ಅವನ ನಾಮನಿರ್ದೇಶಿತನಿಗೆ ಅಥವಾ ನಾಮ ನಿರ್ದೇಶಿತನು ಇಲ್ಲದಿದ್ದಲ್ಲಿ ಅವನ ಕಾನೂನು ಸಮ್ಮತ ಅವಲಂಭಿತರು ಅಥವಾ ವಾರಸುದಾರರಿಗೆ ಸಮಾನ ಭಾಗವಾಗಿ ಸಂದಾಯ ಮಾಡತಕ್ಕದ್ದು.

(3) ನಿಧಿಯ ಸದಸ್ಯನು, ಅವನು, ಅದರ ಸದಸ್ಯನಾಗಿ ಪ್ರವೇಶ ಪಡೆದ ಐದು ವರ್ಷಗಳ ಅನಂತರ ಯಾವುದೇ ಕಾಲದಲ್ಲಿ ನಿವೃತ್ತಿಯ ಪ್ರಯೋಜನಗಳಿಗಾಗಿ ಆಯ್ಕೆ ಮಾಡಿಕೊಳ್ಳಬಹುದು, ಆದರೆ ಅವನು ನಿಯಮಿಸಬಹುದಾದಂಥ ಷರತ್ತುಗಳಿಗೆ ಒಳಪಟ್ಟು ಹೊಸ ಸದಸ್ಯನಾಗಿ ನಿಧಿಗೆ ಪುನಃ ಪ್ರವೇಶ ಪಡೆಯಲು ಅರ್ಹನಾಗಿರತಕ್ಕದ್ದು;

ಪರಂತು, ಆ ಸದಸ್ಯನು, ಕಾಯಂ ಅಸಮರ್ಥತೆಯಿಂದ ನರಳುತ್ತಿದ್ದರೆ, ಅವನು ನಿಧಿಗೆ ಪ್ರವೇಶ ಪಡೆದ ಐದು ವರ್ಷಗಳೊಳಗಾಗಿ ನಿವೃತ್ತಿ ಹೊಂದಲು ಅವಕಾಶ ಕೊಡತಕ್ಕದ್ದು.

(4) ಈ ಅಧಿನಿಯಮದ ಮೇರೆಗೆ ಸಂದಾಯ ಮಾಡಬೇಕಾದ ಉದ್ದೇಶಕ್ಕಾಗಿ ವೃತ್ತಿಯನ್ನು ಪೂರ್ಣಗೊಳಿಸಿದ ವರ್ಷಗಳ ಅವಧಿಯನ್ನು ಲೆಕ್ಕ ಹಾಕುವುದಕ್ಕಾಗಿ ನಿಧಿಗೆ ಸದಸ್ಯನಾಗಿ ಪ್ರವೇಶ ಪಡೆಯುವುದಕ್ಕಿಂತ ಮುಂಚೆ, ನ್ಯಾಯವಾದಿ ವರ್ಗದಲ್ಲಿ ವ್ಯಕ್ತಿಯ ಪ್ರತಿ ನಾಲ್ಕು ವರ್ಷಗಳನ್ನು, ಯಾವುದಾದರೂ ಇದ್ದರೆ, ವೃತ್ತಿಯ ಒಂದು ವರ್ಷದಂತೆ ಗಣನೆ ಮಾಡತಕ್ಕದ್ದು ಮತ್ತು ಅಂಥ ಪ್ರವೇಶದ ನಂತರ ವೃತ್ತಿಯಲ್ಲಿ ನಿರತನಾಗಿದ್ದ ವರ್ಷಗಳ ಸಂಖ್ಯೆಗೆ ಅದನ್ನು ಸೇರಿಸತಕ್ಕದ್ದು.

(5) ಸದಸ್ಯನು, ನಿಧಿಗೆ ಅವನು ಪ್ರವೇಶ ಹೊಂದಿದ ಐದು ವರ್ಷಗಳೊಳಗಾಗಿ ನಿಧನ ಹೊಂದಿದ ಸಂದರ್ಭದಲ್ಲಿ ಸಂದರ್ಭಾನುಸಾರ ಅವನ ನಾಮ ನಿರ್ದೇಶಿತ ಅಥವಾ ಕಾನೂನು ಸಮ್ಮತ ವಾರಸುದಾರರು, ವೃತ್ತಿಯಲ್ಲಿ ನಿರತನಾಗಿದ್ದ ಪ್ರತಿ ವರ್ಷಕ್ಕೆ ಒಂದು ಸಾವಿರ ರೂಪಾಯಿಗಳ ದರದ ಮೊಬಲಗನ್ನು ಪಡೆಯಲು ಅರ್ಹರಾಗಿರತಕ್ಕದ್ದು.

(6) ನಿಧಿಯಿಂದ ಸಂದಾಯ ಮಾಡುವುದಕ್ಕಾಗಿ ಅರ್ಜಿಯನ್ನು ನಿಯಮಿಸಬಹುದಾದಂಥ ನಮೂನೆಯಲ್ಲಿ ಟ್ರಸ್ಟೀ ಸಮಿತಿಗೆ ಸಲ್ಲಿಸತಕ್ಕದ್ದು.

(7) (6)ನೇ ಉಪಪ್ರಕರಣದ ಮೇರೆಗೆ ಸ್ವೀಕರಿಸಲಾದ ಅರ್ಜಿಯನ್ನು ಟ್ರಸ್ಟೀ ಸಮಿತಿಯು ತಾನು ಅವಶ್ಯವೆಂದು ಭಾವಿಸುವಂಥ ವಿಚಾರಣೆಯ ನಂತರ, ವಿಲೆ ಮಾಡತಕ್ಕದ್ದು.

**17. ನಿಧಿಯಲ್ಲಿನ ಹಿತಾಸಕ್ತಿಯ ಪರಭಾರೆ, ಜಪ್ತಿ ಇತ್ಯಾದಿಗಳ ಮೇಲೆ ಪರಿಬಂಧ.–** (1) ನಿಧಿಯಲ್ಲಿನ ಯಾವನೇ ಸದಸ್ಯನ ಹಿತಾಸಕ್ತಿಯನ್ನು ಅಥವಾ ನಿಧಿಯಿಂದ ಯಾವುದೇ ಮೊಬಲಗನ್ನು ಪಡೆಯಲು, ಸದಸ್ಯ ಅಥವಾ ಅವನ ನಾಮನಿರ್ದೇಶಿತ ಅಥವಾ ಕಾನೂನು ಸಮ್ಮತ ವಾರಸುದಾರರ ಹಕ್ಕನ್ನು ಹಸ್ತಾಂತರಿಸತಕ್ಕದ್ದಲ್ಲ, ಪರಭಾರೆ ಮಾಡತಕ್ಕದ್ದಲ್ಲ ಅಥವಾ ಋಣಭಾರಗೊಳಿಸತಕ್ಕದ್ದಲ್ಲ ಮತ್ತು ಯಾವುದೇ ನ್ಯಾಯಾಲಯ ನ್ಯಾಯಾಧೀಕರಣ ಅಥವಾ ಇತರೆ ಪ್ರಾಧಿಕಾರದ ಯಾವುದೇ ಡಿಕ್ರಿ ಅಥವಾ ಆದೇಶದ ಮೇರೆಗೆ ಜಫ್ತಿ ಮಾಡಲು ಹೊಣೆಯಾಗಿರತಕ್ಕದ್ದಲ್ಲ.

(2) ನಿಧಿಯ ಅಥವಾ ಅದರಲ್ಲಿನ ಯಾವನೇ ಸದಸ್ಯ ಅಥವಾ ಅವನ ನಾಮನಿರ್ದೇಶಿತ ಅಥವಾ ವಾರಸುದಾರನ ಹಿತಾಸಕ್ತಿಯ ವಿರುದ್ಧ ಯಾವನೇ ಸಾಲಗಾರನು ಕ್ರಮತೆಗೆದುಕೊಳ್ಳಲು ಹಕ್ಕುಳ್ಳವನಾಗಿರತಕ್ಕದ್ದಲ್ಲ.

**ವಿವರಣೆ:** ಈ ಪ್ರಕರಣದ ಉದ್ದೇಶಗಳಿಗಾಗಿ "ಸಾಲಗಾರ" ಎಂಬುದು 1920 ರ ಪ್ರಾಂತೀಯ ದಿವಾಳಿ ಅಧಿನಿಯಮ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಮೇರೆಗೆ ನೇಮಕಗೊಂಡ ಸರ್ಕಾರಿ ಅಸೈನಿ ಅಥವಾ ರಿಸೀವರ್‌ನನ್ನು ಒಳಗೊಳ್ಳುತ್ತದೆ.

**18. ಸದಸ್ಯರುಗಳಿಗೆ ಸಮೂಹ ಜೀವವಿಮೆ ಮತ್ತು ಇತರ ಪ್ರಯೋಜನಗಳು.–** ಬಾರ್‌ಕೌನ್ಸಿಲ್ ನಿಧಿಯ ಸದಸ್ಯರ ಕಲ್ಯಾಣಕ್ಕಾಗಿ–

(ಕ) ನಿಧಿಯ ಸದಸ್ಯರಾಗಿ ಭಾರತೀಯ ಜೀವ ವಿಮಾ ನಿಗಮದಿಂದ ಸಮೂಹ ಜೀವ ವಿಮಾ ಪಾಲಿಸಿಗಳನ್ನು ಪಡೆಯಬಹುದು;

(ಖ) ನಿಧಿಯ ಸದಸ್ಯರಾಗಿ ಮತ್ತು ಅವರ ಅವಲಂಬಿತರಿಗಾಗಿ ವೈದ್ಯಕೀಯ ಮತ್ತು ಶೈಕ್ಷಣಿಕ ಸೌಲಭ್ಯಗಳನ್ನು ಒದಗಿಸಬಹುದು;

(ಗ) ನಿಯಮಿಸಬಹುದಾದಂಥ ಇತರೆ ಪ್ರಯೋಜನಗಳನ್ನು ಒದಗಿಸಬಹುದು.

**19. ಟ್ರಸ್ಟೀ ಸಮಿತಿಯ ಸಭೆಗಳು.–** (1) ಟ್ರಸ್ಟೀ ಸಮಿತಿಯು ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ ಮೇರೆಗೆ ವ್ಯವಹಾರ ನಡೆಸಲು ಕನಿಷ್ಠ ಮೂರು ತಿಂಗಳಿಗೊಮ್ಮೆ ಅಥವಾ ಅವಶ್ಯವೆಂದು ಕಂಡುಬಂದಲ್ಲಿ ಮೇಲಿಂದ ಮೇಲೆ ಸಭೆ ಸೇರತಕ್ಕದ್ದು.

(2) ಟ್ರಸ್ಟೀ ಸಮಿತಿಯ ಸಭೆಗಾಗಿ ಅದರ ಮೂವರು ಸದಸ್ಯರು ಕೋರಂ ಆಗಿರತಕ್ಕದ್ದು.

(3) ಅಧ್ಯಕ್ಷ ಅಥವಾ ಅವನ ಗೈರುಹಾಜರಿಯಲ್ಲಿ, ಹಾಜರಿರುವ ಸದಸ್ಯರು ಚುನಾಯಿಸಿದ ಸದಸ್ಯನು ಟ್ರಸ್ಟೀ ಸಮಿತಿ ಸಭೆಯ ಅಧ್ಯಕ್ಷತೆ ವಹಿಸತಕ್ಕದ್ದು.

(4) ಟ್ರಸ್ಟೀ ಸಮಿತಿಯ ಸಭೆಯ ಮುಂದೆ ಬರುವ ಯಾವುದೇ ವಿಷಯವನ್ನು ಸಭೆಯಲ್ಲಿ ಹಾಜರಿದ್ದು ಮತ ಚಲಾಯಿಸುವ ಸದಸ್ಯರ ಬಹುಮತದ ಮೂಲಕ ತೀರ್ಮಾನಿಸತಕ್ಕದ್ದು ಮತ್ತು ಸಮಾನ ಮತದ ಸಂದರ್ಭದಲ್ಲಿ ಅಧ್ಯಕ್ಷ ಅಥವಾ ಸಭೆಯ ಅಧ್ಯಕ್ಷತೆ ವಹಿಸಿರುವ ಸದಸ್ಯನು ನಿರ್ಣಾಯಕ ಮತವನ್ನು ಹೊಂದಿರತಕ್ಕದ್ದು.

**20. ಟ್ರಸ್ಟೀ ಸಮಿತಿಯ ಸದಸ್ಯರ ಪ್ರಯಾಣ ಮತ್ತು ದಿನಭತ್ಯೆ.–** ಟ್ರಸ್ಟೀ ಸಮಿತಿಯ ಅಧಿಕಾರೇತರ ಸದಸ್ಯರು ಬಾರ್ ಕೌನ್ಸಿಲ್‌ನ ಸದಸ್ಯರಿಗೆ ಸಲ್ಲಬಹುದಾದಂಥ ಪ್ರಯಾಣ ಭತ್ಯೆ ಮತ್ತು ದಿನಭತ್ಯೆಗಳನ್ನು ಪಡೆಯಲು ಅರ್ಹರಾಗಿರತಕ್ಕದ್ದು.

**21. ಟ್ರಸ್ಟೀ ಸಮಿತಿಯ ತೀರ್ಮಾನಗಳ ವಿರುದ್ಧ ಅಪೀಲು.–** (1) ಟ್ರಸ್ಟೀ ಸಮಿತಿಯ ಯಾವುದೇ ತೀರ್ಮಾನದ ವಿರುದ್ಧ ಬಾರ್ ಕೌನ್ಸಿಲ್‌ಗೆ ಅಪೀಲು ಹೂಡಲು ಅವಕಾಶವಿರತಕ್ಕದ್ದು.

(2) ಅಪೀಲು ನಿಯಮಿಸಿದ ನಮೂನೆಯಲ್ಲಿರತಕ್ಕದ್ದು, ಮತ್ತು ಅದಕ್ಕೆ,–

(ಕ) ಯಾವ ಆದೇಶದ ವಿರುದ್ಧ ಅಪೀಲು ಹೂಡಲಾಗಿದೆಯೋ ಆ ಆದೇಶದ ಒಂದು ಪ್ರತಿ; ಮತ್ತು

(ಖ) ಯಾವುದೇ ಅನುಸೂಚಿತ ಬ್ಯಾಂಕಿನ, ಕರ್ನಾಟಕದ ಯಾವುದೇ ಶಾಖೆಯಲ್ಲಿ ಬಾರ್‌ಕೌನ್ಸಿಲ್ ಲೆಕ್ಕಕ್ಕೆ ಜಮೆ ಮಾಡಿದ ಒಂದು ನೂರು ರೂಪಾಯಿಗಳ ಸಂದಾಯ ಮಾಡಿದುದರ ಸಾಕ್ಷ್ಯವಾಗಿ ಒಂದು ರಸೀದಿ;

– ಇವುಗಳನ್ನು ಲಗತ್ತಿಸತಕ್ಕದ್ದು.

(3) ಅಪೀಲನ್ನು ಯಾವ ಆದೇಶದ ವಿರುದ್ಧ ಮಾಡಲಾಗಿದೆಯೋ ಆ ಆದೇಶವು ತಲುಪಿದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ದಾಖಲು ಮಾಡತಕ್ಕದ್ದು.

(4) ಅಪೀಲಿನ ಮೇಲೆ ಬಾರ್ ಕೌನ್ಸಿಲ್‌ನ ತೀರ್ಮಾನವು ಅಂತಿಮವಾಗಿರತಕ್ಕದ್ದು.

**22. ಬಾರ್ ಕೌನ್ಸಿಲ್‌ನಿಂದ ಸ್ಟಾಂಪುಗಳ ಮುದ್ರಣ ಮತ್ತು ಹಂಚಿಕೆ.–** (1) ಬಾಕ್ ಕೌನ್ಸಿಲ್ ಎರಡು ರೂಪಾಯಿಗಳ ಮೌಲ್ಯದ ಕಲ್ಯಾಣ ನಿಧಿ ಸ್ಟಾಂಪುಗಳನ್ನು ಬಾರ್ ಕೌನ್ಸಿಲ್‌ನ ಲಾಂಛನದೊಂದಿಗೆ ಮತ್ತು ಅವುಗಳ ಮೌಲ್ಯವನ್ನು ಅದರ ಮೇಲೆ ಅಂತರ್ಲೇಖಿಸಿ ಮುದ್ರಿಸತಕ್ಕದ್ದು.

(2) ಕಲ್ಯಾಣ ನಿಧಿ ಸ್ಟಾಂಪುಗಳು 1"x2" ಅಳತೆಯಲ್ಲಿರತಕ್ಕದ್ದು ಮತ್ತು ಅವುಗಳನ್ನು ನಿಧಿಯ ಸದಸ್ಯರಿಗೆ ಮಾತ್ರ ಮಾರಾಟ ಮಾಡತಕ್ಕದ್ದು.

(3) ಕಲ್ಯಾಣ ನಿಧಿಯ ಸ್ಟಾಂಪುಗಳು ಬಾರ್ ಕೌನ್ಸಿಲ್‌ನ ಅಭಿರಕ್ಷೆಯಲ್ಲಿರತಕ್ಕದ್ದು.

(4) ಕಲ್ಯಾಣ ನಿಧಿ ಸ್ಟಾಂಪುಗಳ ವಿತರಣೆ ಮತ್ತು ಮಾರಾಟವನ್ನು ನ್ಯಾಯವಾದಿ ಸಂಘಗಳ ಮೂಲಕ ಬಾರ್ ಕೌನ್ಸಿಲ್ ನಿಯಂತ್ರಿಸತಕ್ಕದ್ದು.

(5) ಬಾರ್ ಕೌನ್ಸಿಲ್ ಮತ್ತು ನ್ಯಾಯವಾದಿ ಸಂಘ ಇವು ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ಅಂಥ ರೀತಿಯಲ್ಲಿ ಕಲ್ಯಾಣ ನಿಧಿ ಸ್ಟಾಂಪುಗಳ ಸರಿಯಾದ ಲೆಕ್ಕಪತ್ರಗಳನ್ನು ಇಡತಕ್ಕದ್ದು.

(6) ನ್ಯಾಯವಾದಿ ಸಂಘಗಳು ಕಲ್ಯಾಣ ನಿಧಿ ಸ್ಟಾಂಪುಗಳ ಮೌಲ್ಯದ ಶೇಕಡಾ ಹತ್ತರಷ್ಟನ್ನು ಪ್ರಾಸಂಗಿಕ ವೆಚ್ಚಗಳಿಗಾಗಿ ಕಳೆದು ಉಳಿದ ಮೌಲ್ಯವನ್ನು ಸಂದಾಯ ಮಾಡಿ ಕಲ್ಯಾಣ ನಿಧಿ ಸ್ಟಾಂಪುಗಳನ್ನು ಬಾರ್ ಕೌನ್ಸಿಲ್‌ನಿಂದ ಖರೀದಿಸತಕ್ಕದ್ದು.

**23. ವಕಾಲತ್ತು, ಸ್ಟಾಂಪುಗಳನ್ನು ಹೊಂದಿರತಕ್ಕದ್ದು.–** (1) ನಿಧಿಯ ಪ್ರತಿಯೊಬ್ಬ ಸದಸ್ಯನು, ತಾನು ದಾಖಲು ಮಾಡಿದ ಪ್ರತಿಯೊಂದು ವಕಾಲತ್ತಿನ ಮೇಲೆ ಒಂದು ಕಲ್ಯಾಣ ನಿಧಿ ಸ್ಟಾಂಪನ್ನು ಅಂಟಿಸತಕ್ಕದ್ದು ಮತ್ತು ಹಾಗೆ ಸ್ಟಾಂಪು ಅಂಟಿಸಿರದ ಯಾವುದೇ ವಕಾಲತ್ತನ್ನು ಯಾವುದೇ ನ್ಯಾಯಾಲಯ, ನ್ಯಾಯಾಧೀಕರಣ ಅಥವಾ ಇತರ ಪ್ರಾಧಿಕಾರದ ಮುಂದೆ ದಾಖಲು ಮಾಡತಕ್ಕದ್ದಲ್ಲ ಅಥವಾ ಅದು ಅದನ್ನು ಸ್ವೀಕರಿಸತಕ್ಕದ್ದಲ್ಲ.

(2) ಯಾವುದೇ ನ್ಯಾಯಾಲಯ, ನ್ಯಾಯಾಧಿಕರಣ ಅಥವಾ ಇತರೆ ಪ್ರಾಧಿಕಾರದ ಮುಂದೆ ದಾಖಲು ಮಾಡಲಾದ ವಕಾಲತ್ತಿನ ಮೇಲೆ ಅಂಟಿಸಲಾದ ಪ್ರತಿಯೊಂದು ಕಲ್ಯಾಣ ನಿಧಿ ಸ್ಟಾಂಪನ್ನು 1958ರ ಕರ್ನಾಟಕ

ನ್ಯಾಯಲಯ ಫೀಜುಗಳು ಮತ್ತು ದಾವೆಗಳ ಮೌಲ್ಯ ನಿಗದಿ ಅಧಿನಿಯಮ (1958ರ ಕರ್ನಾಟಕ ಅಧಿನಿಯಮ 16) ರಲ್ಲಿ ಉಪಬಂಧಿಸಿದ ರೀತಿಯಲ್ಲಿ ರದ್ದುಗೊಳಿಸತಕ್ಕದ್ದು.

(3) ಕಲ್ಯಾಣ ನಿಧಿ ಸ್ಟಾಂಪಿನ ಮೌಲ್ಯವು ಪ್ರಕರಣದಲ್ಲಿನ ಖರ್ಚು ಎನಿಸತಕ್ಕದ್ದಲ್ಲ ಅಥವಾ ಕಕ್ಷಿಗಾರನಿಂದ ಯಾವುದೇ ಸಂದರ್ಭದಲ್ಲಿ ಅದನ್ನು ಸಂಗ್ರಹಿಸತಕ್ಕದ್ದಲ್ಲ.

(4) ಸದಸ್ಯನಿಂದಾದ, (3)ನೇ ಉಪಪ್ರಕರಣದ ಉಪಬಂಧಗಳ ಯಾವುದೇ ಉಲ್ಲಂಘನೆಯು, ನಿಧಿಯ ಪ್ರಯೋಜನಗಳಿಗೆ ಅವನನ್ನು ಹಕ್ಕಿಲ್ಲದಂತೆ ಮಾಡತಕ್ಕದ್ದೇ ಮತ್ತು ಟ್ರಸ್ಟೀ ಸಮಿತಿಯು ಅಂಥ ಸಂದರ್ಭಗಳನ್ನು ಯುಕ್ತ ಕ್ರಮಕ್ಕಾಗಿ ಬಾರ್ ಕೌನ್ಸಿಲ್‌ಗೆ ವರದಿ ಮಾಡತಕ್ಕದ್ದು.

**24. ಸದ್ಭಾವನೆಯಿಂದ ಕೈಕೊಂಡ ಕಾರ್ಯದ ಸಂರಕ್ಷಣೆ.–** (1) ಈ ಅಧಿನಿಯಮಕ್ಕೆ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮಕ್ಕೆ ಅನುಗುಣವಾಗಿ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ, ಯಾವುದೇ ಕಾರ್ಯಕ್ಕಾಗಿ ಯಾವನೇ ವ್ಯಕ್ತಿಯ ವಿರುದ್ಧ ಯಾವುದೇ ದಾವೆ, ಪ್ರಾಸಿಕ್ಯೂಷನ್ ಅಥವಾ ಇತರೆ ಕಾನೂನು ವ್ಯವಹರಣೆಗಳನ್ನು ಹೂಡತಕ್ಕದ್ದಲ್ಲ.

(2) ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮಕ್ಕೆ ಅನುಗುಣವಾಗಿ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ, ಕಾರ್ಯದಿಂದ ಉಂಟಾದ ಅಥವಾ ಉಂಟಾಗುವ ಸಂಭವವಿರುವ ಯಾವುದೇ ಹಾನಿಗಾಗಿ ಯಾವುದೇ ದಾವೆ ಅಥವಾ ಇತರೆ ಕಾನೂನು ವ್ಯವಹರಣೆಗಳನ್ನು ಟ್ರಸ್ಟೀ ಸಮಿತಿ ಅಥವಾ ಬಾರ್ ಕೌನ್ಸಿಲ್‌ನ ವಿರುದ್ಧ ಹೂಡತಕ್ಕದ್ದಲ್ಲ.

**25. ಸಿವಿಲ್ ನ್ಯಾಯಾಲಯಗಳ ಅಧಿಕಾರ ವ್ಯಾಪ್ತಿಯ ಪ್ರತಿಷೇಧ.–** ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ಯಾವ ಪ್ರಶ್ನೆ ಅಥವಾ ವಿಷಯವನ್ನು ಟ್ರಸ್ಟೀ ಸಮಿತಿ ಅಥವಾ ಬಾರ್ ಕೌನ್ಸಿಲ್ ಬಗೆಹರಿಸಬೇಕೆಂದು ಅಥವಾ ತಿರ್ಮಾನಿಸಬೇಕೆಂದು, ಅಥವಾ ವ್ಯವಹರಿಸಬೇಕೆಂದು ಅಥವಾ ನಿರ್ಧರಿಸಬೇಕೆಂದು ಅಗತ್ಯಪಡಿಸಲಾಗಿದೆಯೋ, ಆ ಯಾವುದೇ ಪ್ರಶ್ನೆ ಅಥವಾ ಆ ಯಾವುದೇ ವಿಷಯವನ್ನು, ಬಗೆಹರಿಸುವ, ತೀರ್ಮಾನಿಸುವ ಅಥವಾ ವ್ಯವಹರಿಸುವ ಅಥವಾ ನಿರ್ಧರಿಸುವ ಅಧಿಕಾರ ವ್ಯಾಪ್ತಿಯನ್ನು ಯಾವುದೇ ಸಿವಿಲ್ ನ್ಯಾಯಾಲಯವು ಹೊಂದಿರತಕ್ಕದ್ದಲ್ಲ.

**26. ಸಾಕ್ಷಿಗಳನ್ನು ಸಮನು ಮಾಡಲು ಮತ್ತು ಸಾಕ್ಷ್ಯವನ್ನು ಪಡೆಯಲು ಅಧಿಕಾರ.–** ಟ್ರಸ್ಟೀ ಸಮಿತಿ ಮತ್ತು ಬಾರ್ ಕೌನ್ಸಿಲ್, ಈ ಅಧಿನಿಯಮದ ಮೇರೆಗೆ ಯಾವುದೇ ವಿಚಾರಣೆಯ ಉದ್ದೇಶಗಳಿಗಾಗಿ, 1908ರ ಸಿವಿಲ್ ಪ್ರಕ್ರಿಯಾ ಸಂಹಿತೆಯ ಮೇರೆಗೆ ದಾವೆಯ ಅಧಿವಿಚಾರಣೆ ಮಾಡುವಾಗ, ಸಿವಿಲ್ ನ್ಯಾಯಾಲಯದಲ್ಲಿ ನಿಹಿತವಾದ ಅಧಿಕಾರಗಳನ್ನು ಈ ಕೆಳಕಂಡ ವಿಷಯಗಳಿಗೆ ಸಂಬಂಧಿಸಿದಂತೆ ಹೊಂದಿರತಕ್ಕದ್ದು, ಎಂದರೆ,–

(ಕ) ಯಾವನೇ ವ್ಯಕ್ತಿ ಹಾಜರಾತಿಯನ್ನು ಒತ್ತಾಯಪಡಿಸುವುದು ಅಥವಾ ಪ್ರಮಾಣದ ಮೇಲೆ ಅವನನ್ನು ಪರೀಕ್ಷಿಸುವುದು;

(ಖ) ದಸ್ತಾವೇಜುಗಳನ್ನು ಕಂಡು ಹಿಡಿಯುವುದು ಮತ್ತು ಹಾಜರುಪಡಿಸುವುದನ್ನು ಅಗತ್ಯ ಪಡಿಸುವುದು;

(ಗ) ಶಪಥ ಪತ್ರದ ಮೇಲೆ ಸಾಕ್ಷ್ಯವನ್ನು ಸ್ವೀಕರಿಸುವುದು;

(ಘ) ಸಾಕ್ಷಿಗಳನ್ನು ಪರೀಕ್ಷಿಸುವುದಕ್ಕಾಗಿ ಕಮೀಷನ್‌ಗಳನ್ನು ಹೊರಡಿಸುವುದು.

**27. ನೋಂದಾಯಿತ ಗುಮಾಸ್ತರ ಕಲ್ಯಾಣ ನಿಧಿ.–** (1) ರಾಜ್ಯ ಸರ್ಕಾರವು ಅದು ನಿಯಮಿಸಬಹುದಾದಂಥ ನಿಯಮಗಳಿಗೆ ಒಳಪಟ್ಟು, ರಾಜ್ಯದಲ್ಲಿರುವ ನೋಂದಾಯಿತ ಗುಮಾಸ್ತರಿಗೆ ನಿವೃತ್ತಿ ಪ್ರಯೋಜನಗಳನ್ನು ಸಂದಾಯ ಮಾಡುವುದಕ್ಕಾಗಿ ಕರ್ನಾಟಕ ನೋಂದಾಯಿತ ಗುಮಾಸ್ತರ ಕಲ್ಯಾಣ ನಿಧಿ ಎಂದು ಕರೆಯಲಾಗುವ ನಿಧಿಯೊಂದನ್ನು ರಚಿಸತಕ್ಕದ್ದು.

(2) ನಿಧಿಗೆ,–

(ಕ) ರಾಜ್ಯ ಸರ್ಕಾರವು ಕೊಡಬಹುದಾದ ಯಾವುದೇ ಅನುದಾನ; ಮತ್ತು;

(ಖ) ಭಾರತದ ಬಾರ್ ಕೌನ್ಸಿಲ್, ಬಾರ್ ಕೌನ್ಸಿಲ್, ಯಾವುದೇ ನ್ಯಾಯವಾದಿಗಳ ಸಂಘ, ಯಾವುದೇ ಸಂಘ ಅಥವಾ ಪ್ರಾಧಿಕಾರ, ಸಂಸ್ಥೆ, ಯಾವನೇ ನ್ಯಾಯವಾದಿ ಅಥವಾ ಯಾವನೇ ಇತರ ವ್ಯಕ್ತಿಯು ನಿಧಿಗೆ ಕೊಟ್ಟ ಯಾವುದೇ ದೇಣಿಗೆ ದಾನ ಅಥವಾ ವಂತಿಗೆ;

– ಇವುಗಳನ್ನು ಜಮೆ ಮಾಡತಕ್ಕದ್ದು.

(3) ರಾಜ್ಯ ಸರ್ಕಾರವು, ನಿಧಿಯ ವಹಿವಾಟಿಗಾಗಿ ಸಮಿತಿಯೊಂದನ್ನು ರಚಿಸತಕ್ಕದ್ದು.

(4) ರಾಜ್ಯ ಸರ್ಕಾರವು, ನಿಧಿಯ ಸದಸ್ಯತ್ವ ಮತ್ತು ವಹಿವಾಟನ್ನು ಒಳಗೊಂಡು ನಿಧಿಗೆ ಸಂಬಂಧಪಟ್ಟ ಎಲ್ಲಾ ವಿಷಯಗಳಿಗಾಗಿ ಮತ್ತು ಯಾವ ಷರತ್ತುಗಳಿಗೆ ಒಳಪಟ್ಟು ನಿಧಿಯಿಂದ ಸಂದಾಯ ಮಾಡತಕ್ಕದ್ದೋ ಆ ಷರತ್ತುಗಳಿಗಾಗಿ ಉಪಬಂದಿಸುವ ನಿಯಮಗಳನ್ನು ರಚಿಸಬಹುದು.

**28. ನಿಯಮ ರಚನಾಧಿಕಾರ.–** ಬಾರ್ ಕೌನ್ಸಿಲ್ ರಾಜ್ಯ ಸರ್ಕಾರದ ಪೂರ್ವಾನುಮೋದನೆಯೊಂದಿಗೆ ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ 27ನೇ ಪ್ರಕರಣದ ಉಪಬಂಧಗಳನ್ನು ಹೊರತುಪಡಿಸಿ ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವ ಉದ್ದೇಶಗಳಿಗಾಗಿ ನಿಯಮಗಳನ್ನು ರಚಿಸಬಹುದು.

**29. 1958ರ 16ನೇ ಅಧಿನಿಯಮದ ತಿದ್ದುಪಡಿ.–** 1958ರ ಕರ್ನಾಟಕ ನ್ಯಾಯಾಲಯದ ಫೀಜುಗಳ ಮತ್ತು ದಾವೆಗಳ ಮೌಲ್ಯ ನಿಗದಿ ಅಧಿನಿಯಮ, (1958ರ ಕರ್ನಾಟಕ ಅಧಿನಿಯಮ 16) ರಲ್ಲಿ 76ನೇ ಪ್ರಕರಣದ ನಂತರ, ಈ ಕೆಳಗಿನ ಪ್ರಕರಣಗಳನ್ನು ಸೇರಿಸತಕ್ಕದ್ದು, ಎಂದರೆ,–

**"76ಕ. ಕಾನೂನು ಪ್ರಯೋಜನ ನಿಧಿ.–** (1) ಈ ಅಧಿನಿಯಮ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನಲ್ಲಿ ಏನೇ ಇದ್ದಾಗ್ಯೂ ಸಿವಿಲ್ ಮತ್ತು ಕ್ರಿಮಿನಲ್ ನ್ಯಾಯಾಲಯಗಳನ್ನು ಹೊರತುಪಡಿಸಿ, ನ್ಯಾಯಾಧಿಕರಣಗಳಿಗೆ ಅಥವಾ ಅಪೀಲು ಪ್ರಾಧಿಕಾರಗಳಿಗೆ, ಅಪೀಲುಗಳು ಅಥವಾ ಪುನರೀಕ್ಷಣೆಗಳಿಗೆ ಸಂಬಂಧಿಸಿದಂತೆ ಪ್ರತಿಯೊಂದು ಅಪೀಲು ಅಥವಾ ಪುನರೀಕ್ಷಣೆಗಾಗಿ, ಒಂದು ನೂರು ರೂಪಾಯಿಗಳಿಗೆ ಮೀರದ ದರದಲ್ಲಿ ಹೆಚ್ಚುವರಿ ನ್ಯಾಯಾಲಯ ಫೀಜನ್ನು ಅಧಿಸೂಚನೆಯ ಮೂಲಕ ವಿಧಿಸುವುದು ರಾಜ್ಯ ಸರ್ಕಾರಕ್ಕೆ ಸಕ್ಷಮವಾಗಿರತಕ್ಕದ್ದು.

(2) ಕಾನೂನು ಪ್ರಯೋಜನ ನಿಧಿಯನ್ನು ರಚಿಸತಕ್ಕದ್ದು ಮತ್ತು ಅದಕ್ಕೆ (1)ನೇ ಉಪಪ್ರಕರಣದ ಮೇರೆಗೆ ವಿಧಿಸಿದ ಮತ್ತು ಸಂಗ್ರಹಿಸಿದ ಹೆಚ್ಚುವರಿ ನ್ಯಾಯಲಯ ಫೀಜನ್ನು ಜಮೆ ಮಾಡತಕ್ಕದ್ದು.

(3) (2)ನೇ ಉಪಪ್ರಕರಣದ ಮೇರೆಗೆ ರಚಿತವಾದ ನಿಧಿಯನ್ನು, ರಾಜ್ಯದ ಜನತೆಗೆ ದಕ್ಷ ಕಾನೂನು ಸೇವೆಯನ್ನು ಒದಗಿಸುವ ಮತ್ತು ಕಾನೂನು ವೃತ್ತಿಗೆ ಸಾಮಾಜಿಕ ಭದ್ರತಾ ಕ್ರಮಗಳನ್ನು ಒದಗಿಸುವ ಉದ್ದೇಶಕ್ಕಾಗಿ ವಿನಿಯೋಗಿಸತಕ್ಕದ್ದು, ಮತ್ತು ಉಪಯೋಗಿಸತಕ್ಕದ್ದು.

(4) ಜನತೆಗೆ ಯಾವ ವಿಧಾನ ಮತ್ತು ರೀತಿಯಲ್ಲಿ ಕಾನೂನು ಸೇವೆಯನ್ನು ಹೆಚ್ಚು ದಕ್ಷತೆಯಿಂದ ಮಾಡಬಹುದೋ ಮತ್ತು ಕಾನೂನು ವೃತ್ತಿಗೆ ಸಾಮಾಜಿಕ ಭದ್ರತಾ ಕ್ರಮಗಳನ್ನು ಒದಗಿಸಬಹುದೋ, ಆ ವಿಧಾನ ಮತ್ತು ರೀತಿಯು, ಸರ್ಕಾರವು ನಿಯಮಗಳ ಮೂಲಕ ನಿಯಮಿಸಿದಂತೆ ಇರತಕ್ಕದ್ದು.

## ಅನುಸೂಚಿ

**(9 ಮತ್ತು 16ನೇ ಪ್ರಕರಣಗಳನ್ನು ನೋಡಿ)**

| | |
|---|---|
| 30 ವರ್ಷಗಳ ಕಾಲಾವಧಿವರೆಗೆ ನಿಧಿಯ ಸದಸ್ಯನಾಗಿದ್ದರೆ– | 30,000 |
| 29 ವರ್ಷಗಳ ಕಾಲಾವಧಿವರೆಗೆ ನಿಧಿಯ ಸದಸ್ಯನಾಗಿದ್ದರೆ– | 29,000 |
| 28 ವರ್ಷಗಳ ಕಾಲಾವಧಿವರೆಗೆ ನಿಧಿಯ ಸದಸ್ಯನಾಗಿದ್ದರೆ– | 28,000 |
| 27 ವರ್ಷಗಳ ಕಾಲಾವಧಿವರೆಗೆ ನಿಧಿಯ ಸದಸ್ಯನಾಗಿದ್ದರೆ– | 27,000 |
| 26 ವರ್ಷಗಳ ಕಾಲಾವಧಿವರೆಗೆ ನಿಧಿಯ ಸದಸ್ಯನಾಗಿದ್ದರೆ– | 26,000 |
| 25 ವರ್ಷಗಳ ಕಾಲಾವಧಿವರೆಗೆ ನಿಧಿಯ ಸದಸ್ಯನಾಗಿದ್ದರೆ– | 25,000 |
| 24 ವರ್ಷಗಳ ಕಾಲಾವಧಿವರೆಗೆ ನಿಧಿಯ ಸದಸ್ಯನಾಗಿದ್ದರೆ– | 24,000 |
| 23 ವರ್ಷಗಳ ಕಾಲಾವಧಿವರೆಗೆ ನಿಧಿಯ ಸದಸ್ಯನಾಗಿದ್ದರೆ– | 23,000 |
| 22 ವರ್ಷಗಳ ಕಾಲಾವಧಿವರೆಗೆ ನಿಧಿಯ ಸದಸ್ಯನಾಗಿದ್ದರೆ– | 22,000 |
| 21 ವರ್ಷಗಳ ಕಾಲಾವಧಿವರೆಗೆ ನಿಧಿಯ ಸದಸ್ಯನಾಗಿದ್ದರೆ– | 21,000 |
| 20 ವರ್ಷಗಳ ಕಾಲಾವಧಿವರೆಗೆ ನಿಧಿಯ ಸದಸ್ಯನಾಗಿದ್ದರೆ– | 20,000 |
| 19 ವರ್ಷಗಳ ಕಾಲಾವಧಿವರೆಗೆ ನಿಧಿಯ ಸದಸ್ಯನಾಗಿದ್ದರೆ– | 19,000 |
| 18 ವರ್ಷಗಳ ಕಾಲಾವಧಿವರೆಗೆ ನಿಧಿಯ ಸದಸ್ಯನಾಗಿದ್ದರೆ– | 18,000 |
| 17 ವರ್ಷಗಳ ಕಾಲಾವಧಿವರೆಗೆ ನಿಧಿಯ ಸದಸ್ಯನಾಗಿದ್ದರೆ– | 17,000 |
| 16 ವರ್ಷಗಳ ಕಾಲಾವಧಿವರೆಗೆ ನಿಧಿಯ ಸದಸ್ಯನಾಗಿದ್ದರೆ– | 16,000 |
| 15 ವರ್ಷಗಳ ಕಾಲಾವಧಿವರೆಗೆ ನಿಧಿಯ ಸದಸ್ಯನಾಗಿದ್ದರೆ– | 15,000 |
| 14 ವರ್ಷಗಳ ಕಾಲಾವಧಿವರೆಗೆ ನಿಧಿಯ ಸದಸ್ಯನಾಗಿದ್ದರೆ– | 14,000 |
| 13 ವರ್ಷಗಳ ಕಾಲಾವಧಿವರೆಗೆ ನಿಧಿಯ ಸದಸ್ಯನಾಗಿದ್ದರೆ– | 13,000 |
| 12 ವರ್ಷಗಳ ಕಾಲಾವಧಿವರೆಗೆ ನಿಧಿಯ ಸದಸ್ಯನಾಗಿದ್ದರೆ– | 12,000 |
| 11 ವರ್ಷಗಳ ಕಾಲಾವಧಿವರೆಗೆ ನಿಧಿಯ ಸದಸ್ಯನಾಗಿದ್ದರೆ– | 11,000 |
| 10 ವರ್ಷಗಳ ಕಾಲಾವಧಿವರೆಗೆ ನಿಧಿಯ ಸದಸ್ಯನಾಗಿದ್ದರೆ– | 10,000 |
| 9 ವರ್ಷಗಳ ಕಾಲಾವಧಿವರೆಗೆ ನಿಧಿಯ ಸದಸ್ಯನಾಗಿದ್ದರೆ– | 9,000 |
| 8 ವರ್ಷಗಳ ಕಾಲಾವಧಿವರೆಗೆ ನಿಧಿಯ ಸದಸ್ಯನಾಗಿದ್ದರೆ– | 8,000 |
| 7 ವರ್ಷಗಳ ಕಾಲಾವಧಿವರೆಗೆ ನಿಧಿಯ ಸದಸ್ಯನಾಗಿದ್ದರೆ– | 7,000 |

| | |
|---|---|
| 6 ವರ್ಷಗಳ ಕಾಲಾವಧಿವರೆಗೆ ನಿಧಿಯ ಸದಸ್ಯನಾಗಿದ್ದರೆ– | 6,000 |
| 5 ವರ್ಷಗಳ ಕಾಲಾವಧಿವರೆಗೆ ನಿಧಿಯ ಸದಸ್ಯನಾಗಿದ್ದರೆ– | 5,000. |

ಸರ್ಕಾರಿ ಮುದ್ರಣಾಲಯ, ಬೆಂಗಳೂರು.